ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
EMAIL : dairyadadaari@gmail.com ಸಂಪುಟ: 01 ಸಂಚಿಕೆ: 128
ಬೆಲೆ ರೂ : 2.00
ರಾಯಚೂರು
ಪುಟ: 4
RNI NO: KNKAN/25/A2795 ಭಾನುವಾರ: 26-04-2026

## ಪರಿಶಿಷ್ಟ ಸಮುದಾಯದ ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್: ಬಿವೈವಿ ಟೀಕೆ

**ಬೆಂಗಳೂರು, ಏ. 25–** ರಾಜ್ಯದ ಪರಿಶಿಷ್ಟ ಜಾತಿಯವರಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಐತಿಹಾಸಿಕ ಮೋಸ ಮತ್ತು ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಹಿಂದಿನ ಬಿಜೆಪಿ ಸರ್ಕಾರವು ಪರಿಶಿಷ್ಟ ಜಾತಿಯವರಿಗೆ ಶೇ. 15 ರಿಂದ 17 ರಷ್ಟು ಮೀಸಲಾತಿಯನ್ನು ಹೆಚ್ಚಿಸಿತ್ತು ಆದರೆ, ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮೀಸಲಾತಿ ಪ್ರಮಾಣವನ್ನು ಶೇ. 15ಕ್ಕೆ ಸೀಮಿತ ಮಾಡಿ ಎಡಗೈ ಸಮುದಾಯದವರಿಗೆ 5.25 ಮತ್ತು ಬಲಗೈ ಸಮುದಾಯದವರಿಗೆ 5.25 ಮೀಸಲಾತಿ ನಿಗದಿ ಮಾಡಿ ಅನ್ಯಾಯವೆಸಗಿದೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಬಲಗೈ ಸಮುದಾಯದವರಿಗೆ ಶೇ. 6 ಮತ್ತು ಎಡಗೈ ಸಮುದಾಯದವರಿಗೆ ಶೇ. 5.5 ಮೀಸಲಾತಿ ನೀಡಿತ್ತು ಎಂದು ಹೇಳಿದ್ದಾರೆ.

ಬಲಗೈ ಮತ್ತು ಎಡಗೈ ಸಮುದಾಯದವರಿಗೆ ಅನ್ಯಾಯ



ಮಾಡಿರುವಜತೆಗೆ ಬಂಜಾರ,ಭೋವಿ, ಕೊರಚ ಹಾಗೂ ಕೊರಮ ಸಮುದಾಯಗಳಿಗೂ ಮೀಸಲಾತಿ ಪ್ರಮಾಣವನ್ನು ಕಡಿಮೆ ಮಾಡಿ ಅನ್ಯಾಯ ಮಾಡಲಾಗಿದೆ. ಈ ಮೂಲಕ ಈ ಸಮುದಾಯಗಳ ಬೆನ್ನಿಗೆ ರಾಜ್ಯ ಸರ್ಕಾರ ಚೂರಿ ಹಾಕಿದೆ ಎಂದು ಅವರು ಹೇಳಿದ್ದಾರೆ.

ನ್ಯಾಯಾಲಯದಲ್ಲಿ ತಡೆಯಾಜ್ಞೆ ಇಲ್ಲದಿದ್ದರೂ ರಾಜ್ಯಸರ್ಕಾರವೇ ಅಫಿಡವಿಟ್ ಸಲ್ಲಿಸಿ ಶೇ. 17ರ ಮೀಸಲಾತಿಯನ್ನು ಶೆ. 15ಕ್ಕೆ ಇಳಿಸಿದ್ದಾಗಿ ಒಪ್ಪಿಕೊಂಡಿದ್ದರ ಫಲ ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣವು 17 ರಿಂದ 15 ಕ್ಕೆ ಇಳಿಯಲು ಕಾರಣವಾಗಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆಗಳು ಖಾಲಿ ಇದ್ದರೂ ಯಾವುದನ್ನು ಭರ್ತಿ ಮಾಡದೆ ಒಳಮೀಸಲಾತಿ ಹೆಸರಿನಲ್ಲಿ ಎರಡೂವರೆ ವರ್ಷಗಳ ಅಮೂಲ್ಯ ಸಮಯವನ್ನು ಕಾಂಗ್ರೆಸ್ ಸರ್ಕಾರ ಹಾಳು ಮಾಡಿದೆ. ಉಳಿದಿರುವ ಕೆಲವ 2 ವರ್ಷಗಳಲ್ಲಿ ಪರಿಶಿಷ್ಟ ಸಮುದಾಯಗಳು ಸೇರಿದಂತೆ ರಾಜ್ಯದ ಜನರ ಕಣ್ಣಿಗೆ ಮಣ್ಣೆರೆಚುವ ರೀತಿಯಲ್ಲಿ ನೇಮಕಾತಿಗೆ ಚಾಲನೆ ಕೊಡುವುದಾಗಿ ಸಮಜಾಯಿಷಿ ನೀಡಿದೆ ಎಂದು ಅವರು ಟೀಕಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಸಮುದಾಯಗಳಿಗೆ ಮಾಡಿರುವ ಅನ್ಯಾಯಕ್ಕೆ ಭವಿಷ್ಯದಲ್ಲಿ ಬೆಲೆ ತೆತ್ತಲೇಬೇಕಾಗುತ್ತದೆ ಎಂಬುದನ್ನು ಕಾಂಗ್ರೆಸ್ ನಾಯಕರು ಮರೆಯಬಾರದು ಎಂದಿರುವ ಅವರು, ಈಗಲೂ ಕಾಂಗ್ರೆಸ್ ಸರ್ಕಾರಕ್ಕೆ ಪರಿಶಿಷ್ಟರ ಬಗ್ಗೆ ಬದ್ಧತೆ ಇದ್ದರೆ ಈಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಶೇ. 17ರ ಮೀಸಲಾತಿ ಪ್ರಮಾಣವನ್ನು ಉಳಿಸಿಕೊಳ್ಳಲು ಸೂಕ್ತ ಕಾನೂನು ಹೋರಾಟ ನಡೆಸುವುದು ಒಳಿತು ಎಂದು ಅವರು ಹೇಳಿದ್ದಾರೆ.


## ಮೊದಲ ಹಂತದ ಮನೆಪಟ್ಟಿ ಸಮೀಕ್ಷೆ ಪೂರ್ಣಗೊಳಿಸಿದ ಗಣತಿದಾರರಿಗೆ ಅಭಿನಂದನೆ



**ಮಾನ್ವಿ:** ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಸರಕಾರದ ಭಾರತದ ಜನಗಣತಿ ಅಂಗವಾಗಿ ಮೊದಲ ಹಂತದ ಮನೆಪಟ್ಟಿ ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗಣತಿದಾರರನ್ನು ಹಾಗೂ ಮೇಲ್ವಿಚಾರಕರನ್ನು ಪಟ್ಟಣದ ಜನಗಣತಿ ಚಾರ್ಜ ಅಧಿಕಾರಿ ಹಾಗೂ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಅಭಿನಂದಿಸಿ ಮಾತನಾಡಿ ಭಾರತ ಸರ್ಕಾರದ ಮಹತ್ವಕಾಂಕ್ಷೆಯೋಜನೆಯಾದ ಜನಗಣತಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ತಿಳಿಸಿದರು. ಮೊದಲ ಹಂತದ ಮನೆಪಟ್ಟಿ ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗಣತಿದಾರರಾದ ಪ್ರಮೋದಕುಮಾರ, ಸೋಮಶೇಖರ್,ಆಂಜನೇಯ್ಯ,ಶೋಭಾ, ರೆಹಮಾತ್ ಖಾನ್ ರನ್ನು ಸನ್ಮಾನಿಸಿ ಗೌರವಿಸಿ ಬಹುಮಾನಗಳನ್ನು ವಿತರಿಸಲಾಯಿತು. ಬೇಸಿಗೆ ಇರುವುದರಿಂದ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಕುಡಿಯುವ ನೀರಿನ ಬಾಟಲ್ ಗಳನ್ನು ವಿತರಿಸಲಾಯಿತು.

## ಸಿರವಾರ್ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಸಮಸ್ಯೆ: ಪ್ರಯಾಣಿಕರ ಪರದಾಟ





ಧೈರ್ಯದ ದಾರಿ

**ಸಿರವಾರ್:** ರಾಯಚೂರು ಜಿಲ್ಲೆಯ ಸಿರವಾರ್ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಪ್ರಯಾಣಿಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಬೇಸಿಗೆಯ ಬಿಸಿಲು ಏರುತ್ತಿದ್ದರೂ ಸಹ ಅಧಿಕಾರಿಗಳು ಪ್ರಯಾಣಿಕರ ಬಾಯಾರಿಕೆ ನೀಗಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ವರದಿಯ ಮುಖ್ಯಾಂಶಗಳು:

**ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತ:** ಬಸ್ ನಿಲ್ದಾಣದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವು ದೀರ್ಘಕಾಲದಿಂದ ದುರಸ್ತಿಗೆ ಬಂದಿದ್ದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿ ಹಣ ಕೊಟ್ಟು ನೀರು ಕೊಳ್ಳಲಾಗದ ಬಡ ಪ್ರಯಾಣಿಕರು ಬಾಯಾರಿಕೆಯಿಂದ ಬಳಲುವಂತಾಗಿದೆ.

**ಖಾಸಗಿ ಅಂಗಡಿಗಳ ಮೊರೆ:** ನಿಲ್ದಾಣದ ಆವರಣದಲ್ಲಿ ನೀರು ಸಿಗದೆ ಇರುವುದರಿಂದ ಪ್ರಯಾಣಿಕರು ಅನಿವಾರ್ಯವಾಗಿ ಖಾಸಗಿ ಅಂಗಡಿಗಳಲ್ಲಿ 20 ರಿಂದ 30 ರೂಪಾಯಿ ನೀಡಿ ನೀರಿನ ಬಾಟಲಿಗಳನ್ನು ಖರೀದಿಸುತ್ತಿದ್ದಾರೆ.

**ಮಹಿಳೆಯರು ಮತ್ತು ಮಕ್ಕಳ ಗೋಳು:** ಬಸ್ಸಿಗಾಗಿ ಗಂಟೆಗಟ್ಟಲೆ ಕಾಯುವ ಹಿರಿಯ ನಾಗರಿಕರು, ಗರ್ಭಿಣಿಯರು ಮತ್ತು ಸಣ್ಣ ಮಕ್ಕಳೊಂದಿಗೆ ಪ್ರಯಾಣಿಸುವವರು ನೀರಿನ ಹನಿಗಾಗಿ ಪರದಾಡುವಂತಾಗಿದೆ.

**ಅಧಿಕಾರಿಗಳ ನಿರ್ಲಕ್ಷ್ಯ:** ಬಸ್ ನಿಲ್ದಾಣದಲ್ಲಿ ನೀರಿನ ಸಮಸ್ಯೆ ಇರುವ ಬಗ್ಗೆ ಹಲವು ಬಾರಿ ಸಾರ್ವಜನಿಕರು ಸಾರಿಗೆ ಸಂಸ್ಥೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಇದುವರೆಗೆ ಯಾವುದೇ ಶಾಶ್ವತ ಪರಿಹಾರ ಸಿಕ್ಕಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಸಾರ್ವಜನಿಕರ ಆಗ್ರಹ:

"ಸಿರವಾರ್ ಒಂದು ಮುಖ್ಯ ವಾಣಿಜ್ಯ ಕೇಂದ್ರವಾಗಿದ್ದು, ದಿನನಿತ್ಯ ಸಾವಿರಾರು ಪ್ರಯಾಣಿಕರು ಇಲ್ಲಿಂದ ವಿವಿಧೆಡೆ ಸಂಚರಿಸುತ್ತಾರೆ. ಇಷ್ಟು ದೊಡ್ಡ ಬಸ್ ನಿಲ್ದಾಣದಲ್ಲಿ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಕೂಡಲೇ ಇಲ್ಲಿನ ನೀರಿನ ಘಟಕವನ್ನು ದುರಸ್ತಿಗೊಳಿಸಬೇಕು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು," ಎಂದು ಸ್ಥಳೀಯ ಪ್ರಯಾಣಿಕರು ಆಗ್ರಹಿಸಿದ್ದಾರೆ.

## ಜಾಲಹಳ್ಳಿಯ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನ ಸ್ವಾಮಿಗೆ ಭರ್ಜರಿ ಸನ್ಮಾನ

ಧೈರ್ಯದ ದಾರಿ

**ರಾಯಚೂರು :** ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನ ಸ್ವಾಮಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ರ್‍ಯಾಂಕ್ ಪಡೆದು ಗ್ರಾಮಕ್ಕೆ ಅಪಾರ ಹೆಮ್ಮೆ ತಂದಿದ್ದಾರೆ.

ಈ ಅಪೂರ್ವ ಸಾಧನೆ ಹಿನ್ನೆಲೆಯಲ್ಲಿ, ಶಾಲೆಯ ಶಿಕ್ಷಕರ ತಂಡವು ಪ್ರಾಂಶುಪಾಲರಾದ ಸೋಮಶೇಖರಗೌಡ ಅವರ ನೇತೃತ್ವದಲ್ಲಿ ವಿದ್ಯಾರ್ಥಿಯ ಸ್ವಂತ ಊರಾದ ಮಲ್ಲಟ (ತಾ. ಸಿರವಾರ, ಜಿ. ರಾಯಚೂರು)ದಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿ, ಮಲ್ಲಿಕಾರ್ಜುನ ಸ್ವಾಮಿ ಹಾಗೂ ಅವರ ಪೋಷಕರಾದ ಸಿದ್ದರಾಮಯ್ಯ ಸ್ವಾಮಿ ಅವರಿಗೆ ಗೌರವಪೂರ್ವಕವಾಗಿ ಸನ್ಮಾನ ಮಾಡಿದರು.

ಅವರ ಮನೆ ಶ್ರೀ ಬ್ರಹ್ಮರಂಬ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಮೀಪದಲ್ಲಿದೆ.

ಈ ಸಂದರ್ಭದಲ್ಲಿ ಪ್ರಾಂಶುಪಾಲರು ಸೋಮಶೇಖರಗೌಡ , ಪಿ.ಟಿ. ಶಿಕ್ಷಕರು ಶರಣಗೌಡ , ವಾರ್ಡನ್: ಅಮರೇಶ್ , ಎಫ್‌ಡಿಎ



ಮಾಳಪ್ಪ ಮತ್ತು ಪೋಷಕರು ಸಿದ್ದರಾಮಯ್ಯ ಸ್ವಾಮಿ, ಮಲ್ಲಪ್ಪ ಬಿ (ಸಾಕೀನ್: ಹೊಸೂರು) ಸೇರಿದಂತೆ ಅನೇಕರು ಉಪಸ್ಥಿತರಿದ್ದರು, ಇದೇ ವೇಳೆ ಗ್ರಾಮಸ್ಥರು ಹಾಗೂ ಪಾಲಕರು ಸೇರಿ ಪ್ರಾಂಶುಪಾಲರು ಮತ್ತು ಶಿಕ್ಷಕರನ್ನೂ ಸನ್ಮಾನಿಸಿ ಗೌರವ ಸಲ್ಲಿಸಿದರು.

ಈ ಸಾಧನೆ ಜಾಲಹಳ್ಳಿ ಗ್ರಾಮಕ್ಕೂ ಹಾಗೂ ಶಾಲೆಯ ಹೆಮ್ಮೆಯ ವಿಷಯವಾಗಿದ್ದು, ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ.

## ತಾಲೂಕಿಗೆ ಪ್ರಥಮ, ರಾಜ್ಯಕ್ಕೆ ನಾಲ್ಕನೇ ಸ್ಥಾನ: ವಿದ್ಯಾರ್ಥಿ ಪ್ರವೀಣಗೆ ಬಿಇಒಯಿಂದ ಸನ್ಮಾನ



ಧೈರ್ಯದ ದಾರಿ

**ಲಿಂಗಸುಗೂರು :** 2025–26ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಲಿಂಗಸೂಗೂರು ತಾಲೂಕಿನ ಒಟ್ಟು ಫಲಿತಾಂಶ 93.8% ದಾಖಲಾಗಿದ್ದು, ತಾಲೂಕಿನ ಶೈಕ್ಷಣಿಕ ಮಟ್ಟಕ್ಕೆ ಹೆಮ್ಮೆ ತಂದಿದೆ.

ತಾಲೂಕಿನ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಕುಮಾರ ಪ್ರವೀಣ ತಂದೆ ಮಹಾಂತೇಶಗೌಡ ಬೇರಗಿ ಎಂ.ಡಿ.ಆರ್.ಎಸ್. ಅಡವಿಭಾವಿ ಶಾಲೆಯ ವಿದ್ಯಾರ್ಥಿಯಾಗಿದ್ದು, 625ರಲ್ಲಿ 622 ಅಂಕಗಳು (99.52%) ಪಡೆದು

ತಾಲೂಕಿಗೆ ಪ್ರಥಮ ಸ್ಥಾನ

ಜಿಲ್ಲೆಗೆ ದ್ವಿತೀಯ ಸ್ಥಾನ

ರಾಜ್ಯಕ್ಕೆ ನಾಲ್ಕನೇ ಸ್ಥಾನ

ಪಡೆಯುವ ಮೂಲಕ ವಿಶಿಷ್ಟ ಸಾಧನೆ ಮಾಡಿದ್ದಾನೆ.

ಈ ಸಾಧನೆಗೆ ಗೌರವ ಸೂಚಕವಾಗಿ ಶನಿವಾರ ವಿದ್ಯಾರ್ಥಿಯ ಸ್ವಗ್ರಾಮ ಹನುಮಗುಡ್ಡದಲ್ಲಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಇ.ಒ. ಸುಜಾತ ಹುನೂರ ಅವರು, ಪ್ರವೀಣನ ಸಾಧನೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲೂ ಉತ್ತಮ ಅವಕಾಶಗಳನ್ನು ಬಳಸಿಕೊಂಡು ಶ್ರದ್ಧೆ, ಪರಿಶ್ರಮದಿಂದ ಯಶಸ್ಸುಸಾಧಿಸಬಹುದೆಂಬುದನ್ನು ಸಾಬೀತುಪಡಿಸಿದ್ದಾನೆ. ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಅಗತ್ಯ ಮಾರ್ಗದರ್ಶನ ಮತ್ತು ಬೆಂಬಲ ನೀಡಲಾಗುತ್ತದೆ ಎಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಹನುಮಂತಪ್ಪ ಕ್ವಾರಿ ಹಾಗೂ ಎಸ್.ಎಸ್.ಎಲ್.ಸಿ. ತಾಲೂಕು ನೋಡಲ್ ಅಧಿಕಾರಿ ಬಸವರಾಜ ಗುಡಿಹಾಳ ಭೇಟಿ ನೀಡಿ, ಊರಿನ ಗುರುಹಿರಿಯರ ಸಮ್ಮುಖದಲ್ಲಿ ಬಿ.ಇ.ಒ. ಕಾರ್ಯಾಲಯದ ವತಿಯಿಂದ ವಿದ್ಯಾರ್ಥಿಯನ್ನು ಸನ್ಮಾನಿಸಿ ಶುಭ ಹಾರೈಸಿದರು.

ಗ್ರಾಮಸ್ಥರು ಹಾಗೂ ಶಾಲಾ ಶಿಕ್ಷಕರು ವಿದ್ಯಾರ್ಥಿಯ ಸಾಧನೆಯನ್ನು ಕೊಂಡಾಡಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಲಿ ಎಂದು ಹಾರೈಸಿದರು.

## ಅಗ್ಗಿ ಮಹೋತ್ಸವ–ಸಾಮೂಹಿಕ ವಿವಾಹ–ಡಾ.ಯತೀಂದ್ರ–ಸುರೇಶ ಭೈರತಿ ಭಾಗಿ–ಯಶಸ್ವಿಗೆ ಸಹಕರಿಸಿ

ಧೈರ್ಯದ ದಾರಿ

**ಕವಿತಾಳ ಏ.25 :** ಪಟ್ಟಣ ಸಮೀಪದ ಪಾತಾಪೂರ ಗ್ರಾಮದಲ್ಲಿ ದಿನಾಂಕ ಏ.20 ರಿಂದ 28 ರ ವರೆಗೆ ನಡೆಯುವ ಗ್ರಾಮದ ಆರಾಧ್ಯ ದೈವ ಬಾಡದಲಿಂಗೇಶ್ವರ ಹಾಗೂ ಶ್ರೀ ಕರಿಲಿಂಗೇಶ್ವರ ದೇವರ ಅಗ್ಗಿ ಮಹೋತ್ಸವ ಹಾಗೂ ಸಾಮೂಹಿಕ ವಿವಾಹಗಳು ಸೇರಿ ನಾನಾ ಧಾರ್ಮಿಕ ಕಾರ್ಯಕ್ರಮಗಳು ನೇರವೇರಲಿವೆ. ದಿನಾಂಕ 29 ರಂದು ರವಿವಾರ ಬೆಳಿಗ್ಗೆ ಅಗ್ಗಿ ಮಹೋತ್ಸವ ನಡೆಯಲಿದ್ದು ಬಳಿಕ ಸಾಮೂಹಿಕ ವಿವಾಹ ನಡೆಯಲಿವೆ, ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಡಾ.ಯತೀಂದ್ರ ಸಿದ್ಧರಾಮಯ್ಯ ಹಾಗೂ ಸಚಿವ ಸುರೇಶ ಭೈರತಿ ಹಾಗೂ ಸಚಿವ ಎನ್.ಎಸ್.ಬೋಸರಾಜು, ಶಾಸಕ ಹಂಪಯ್ಯ ನಾಯಕ ಸೇರಿದಂತೆ ನಾನಾ ಮಠಾದೀಶರು, ಪೂಜ್ಯರು, ಸಮಾಜದ ಪೂಜಾರಿಗಳು ಸೇರಿ ನಾಯಕರು, ಮುಖಂಡರು ಭಾಗವಹಿಸಲಿದ್ದು ಆದ್ದರಿಂದ ಹಾಲುಮತ ಸಮಾಜ ಸೇರಿ ಪ್ರತಿಯೊಂದು ಸಮಾಜದ



ಪ್ರತಿಯೊಬ್ಬರು ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹಾಲುಮತ ಮಹಾಸಭಾದ ಜಿಲ್ಲಾಧ್ಯಕ್ಷ ಹಾಗೂ ಸಿಂಡಿಕೇಟ್ ಸದಸ್ಯ ಶಿವಣ್ಣ ವಕೀಲರು ಹಾಗೂ ಜಿ.ಪಂ.ಮಾಜಿ ಸದಸ್ಯ ಮಾಳಪ್ಪ ತೋಳ, ಜಡೆ ಕರಿಯಪ್ಪ ತಾತಾ, ಶಿವಣ್ಣ ತಾತಾ ಹಣಿಗಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

## ವಿಶ್ವ ಮಲೇರಿಯಾ ದಿನಾಚರಣೆ – ಮಲೇರಿಯಾ ಮುಕ್ತ ಸಮಾಜ ನಿರ್ಮಾಣ ಮಾಡೋಣ ಡಾ.ಹನುಮಂತರೆಡ್ಡಿ

ಧೈರ್ಯದ ದಾರಿ

**ಸಿಂದನೂರು ಎ 25:** ಪ್ರತಿ ವರ್ಷದಂತೆ ಏಪ್ರಿಲ್ 25 ರಂದು ವಿಶ್ವದಾದ್ಯಂತ "ವಿಶ್ವ ಮಲೇರಿಯಾ ದಿನ"ವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಲೇರಿಯಾ ರೋಗವು ಮಾನವಕುಲಕ್ಕೆ ಒಡ್ಡಿರುವ ಸವಾಲುಗಳು ಮತ್ತು ಅದನ್ನು ಮೆಟ್ಟಿ ನಿಲ್ಲಲು ವಿಜ್ಞಾನಿಗಳು ನಡೆಸಿದ ಹೋರಾಟವನ್ನು ಸ್ಮರಿಸುವುದು ಅತ್ಯಗತ್ಯವಾಗಿದೆ ಎಂದರು ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಯಚೂರು ಹಾಗೂ ತಾಲೂಕಾರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರ,ನಗರ.ಆ.ಕೇಂದ್ರ ಸಿಂಧನೂರು ಮತ್ತು ಬಸವ ಪ್ಯಾರಾ ಮೆಡಿಕಲ್ ಕಾಲೇಜ್



ಸಿಂಧನೂರ ರವರ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಇಂದು ನಡೆದ ವಿಶ್ವ ಮಲೇರಿಯಾ ದಿನದ ತಾಲೂಕಾ ಮಟ್ಟದ ಕಾರ್ಯವನ್ನು ಉದ್ದೇಶಿಸಿ ನಾತನಾಡಿದ ಹೃದಯತಜ್ಞರಾದ ಡಾ.ಹನುಮಂತರೆಡ್ಡಿ ಮಲೇರಿಯಾ ರೋಗವು ಪುರಾತನ ಕಾಲದಿಂದಲೂ ಮಾನವನ 2ನೇಪುಟಕ್ಕೆ

ಮೊದಲನೇ ಪುಟದಿಂದ

## ವಿಶ್ವ ಮಲೇರಿಯಾ ದಿನಾಚರಣೆ – ಮಲೇರಿಯಾ ಮುಕ್ತ ಸಮಾಜ ನಿರ್ಮಾಣ ಮಾಡೋಣ ಡಾ.ಹನುಮಂತರೆಡ್ಡಿ

ಆರೋಗ್ಯಕ್ಕೆ ದೊಡ್ಡ ಪಿಡುಗಾಗಿ ಪರಿಣಮಿಸಿತ್ತು. 1897ರಲ್ಲಿ *ಸರ್ ರೊನಾಲ್ಡ್ ರಾಸ್* ಅವರು ಮಲೇರಿಯಾ ಪರಾವಲಂಬಿ ಜೀವಿಗಳು ಹೆಣ್ಣು ಅನಾಫಿಲಿಸ್ ಸೊಳ್ಳೆಗಳ ಮೂಲಕ ಮನುಷ್ಯನಿಗೆ ಹರಡುತ್ತವೆ ಎಂಬುದನ್ನು ಪತ್ತೆಹಚ್ಚುವ ಮೂಲಕ ವೈದ್ಯಕೀಯ ಲೋಕದಲ್ಲಿ ಹೊಸ ಕ್ರಾಂತಿ ಮಾಡಿದರು. ಈ ಸಂಶೋಧನೆಯೇ ಇಂದು ನಾವು ಮಲೇರಿಯಾವನ್ನು ನಿಯಂತ್ರಿಸಲು ಇರುವ ಪ್ರಮುಖ ಅಡಿಪಾಯವಾಗಿದೆ ಎಂದರು.

ಹಿ.ಆ.ನಿರೀಕ್ಷಣಾಧಿಕಾರಿಯಾದ ರಂಗನಾಥ. ಜಿ ಮಾತನಾಡಿ ಈ ಮಾರಕ ರೋಗದಿಂದ ಸಂಭವಿಸುವ ಸಾವು-ನೋವುಗಳನ್ನು ತಡೆಗಟ್ಟಲು ಘನ ಸರ್ಕಾರಗಳು ರಾಷ್ಟ್ರೀಯ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಲಾರ್ವಾ ಸಮೀಕ್ಷೆ, ಫಾಗಿಂಗ್ ಮತ್ತು ಉಚಿತ ಚಿಕಿತ್ಸೆಯಂತಹ ಹತ್ತು ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿವೆ ಎಂದರು.

ತಾಲೂಕಾ ಕಛೇರಿಯ ಆರೋಗ್ಯ ಶಿಕ್ಷಣಾಧಿಕಾರಿಯಾದ ಗೀತಾ ಹಿರೇಮಠ ಮಾತನಾಡಿ ಸರ್ಕಾರದ ಪ್ರಯತ್ನಗಳ ಜೊತೆಗೆ ಸಾರ್ವಜನಿಕರು ಈ ಕೆಳಗಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮುಖ್ಯವಾಗಿದೆ. ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಹಳೆಯ ಟೈಯರ್, ಡಬ್ಬಿ ಮತ್ತು ಕುಂಡಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ನೀರು ಸಂಗ್ರಹಿಸುವ ತೊಟ್ಟಿಗಳನ್ನು ವಾರಕ್ಕೊಮ್ಮೆ ಕಡ್ಡಾಯವಾಗಿ ಸ್ವಚ್ಛಗೊಳಿಸಿ ಒಣಗಿಸಬೇಕು. ಮಲಗುವಾಗ ಕಡ್ಡಾಯವಾಗಿ ಸೊಳ್ಳೆ ಪರದೆಗಳನ್ನು ಬಳಸಬೇಕು ಹಾಗೂ ಸೊಳ್ಳೆ ನಿಯಂತ್ರಣ ಕಿಟಕಿಗಳಿಗೆ ಜಾಲರಿ/ಮೆಸ್ ಗಳನ್ನು ಅಳವಡಿಸಿಕೊಳ್ಳಬೇಕು. ಒಂದು ವೇಳೆ ಜ್ವರ ಅಥವಾ ಮಲೇರಿಯಾ ಲಕ್ಷಣಗಳಾದ ಛಳಿ ಕೂಡಿದ ಜ್ವರ,ವಿಪರೀತ ಬೆವರುವಿಕೆ,ಸ್ನಾಯು ಸೆಳೆತ,ಬಿಟ್ಟು ಬಿಟ್ಟು ಬರುವ ಜ್ವರ,1-14 ದಿನದ ಜ್ಬರ ದಂತಹ ಲಕ್ಷಣ ಕಂಡುಬಂದಲ್ಲಿ ವಿಳಂಬ ಮಾಡದೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ರಕ್ತ ಪರೀಕ್ಷೆ ಸಂಪೂರ್ಣ ಚಿಕಿತ್ಸೆ ಪಡೆಯಬೇಕು ಎಂದರು.

ತಾಲೂಕಾ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಮಾತನಾಡಿ ಅತಿ ಬಿಸಿಲಿನ ತಾಪಮಾನ,ಅತಿವೃಷ್ಟಿ,ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳು ಮನುಷ್ಯನಿಂದ ಆದಂತಹ ಘನಘೋರ ಅಪರಾಧದಿಂದ ಆದ ನೈಸರ್ಗಿಕ ಲೋಪವಾಗಿದೆ ಇದನ್ನು ಸರಿದೂಗಿಸಲು ಪ್ರತಿಯೊಬ್ಬರೂ ಹೆಚ್ಚು ಹೆಚ್ಚು ಮರಗಿಡಗಳನ್ನು ಬೆಳಸಬೇಕು ಅದರೊಟ್ಟಿಗೆ ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು *ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳುತ್ತದೆ, ಮರು ಹೂಡಿಕೆ ಮಾಡಿ, ಮರು ಕಲ್ಪನೆ ಮಾಡಿ, ಮರು ಉತ್ತೇಜನ ನೀಡೋಣ* ಎಂಬ ಈ ವರ್ಷದ ಘೋಷವಾಕ್ಯ ದೊಂದಿಗೆ ಮಲೇರಿಯಾ ಮುಕ್ತ ಕರ್ನಾಟಕ ಗೊಳಿಸಲು ಸಾರ್ವಜನಿಕರು ಸಹರಿಸಲು ಕರೆ ನೀಡಿದರು

ತಾಲೂಕಾ ಆರೋಗ್ಯ ಇಲಾಖೆ ಪ್ರತಿವರ್ಷ ಈ ಸೊಳ್ಳೆ ಗಳಿಂದ ಹರಡುವ ರೋಗ ನಿಯಂತ್ರಣದ ವಿಷಯಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದ್ದು ಜನರು ಭಯಪಡದೆ ಎಚ್ಚರ ವಹಿಸುವುದು ಸೂಕ್ತ ಎಂದರು. ತಾಲೂಕಿನ ಎಲ್ಲಾ ಸಾರ್ವಜನಿಕರು ಆರೋಗ್ಯ ಇಲಾಖೆ ನೀಡಿದ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವ ಮೂಲಕ ಮತ್ತು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವ ಮೂಲಕ ಮಲೇರಿಯಾ ಮುಕ್ತ ತಾಲೂಕನ್ನಾಗಿ ಮಾಡಲು ಕೈಜೋಡಿಸಬೇಕೆಂದು ಈ ಮೂಲಕ ಕೋರಲಾಯಿತು. ಈ ಸಂಧರ್ಭದಲ್ಲಿ ತಾಲೂಕಿನ ಹಿ.ಆ.ನಿರೀಕ್ಷಕ ಸಂಗನಗೌಡ,ಬಸವ ಪ್ಯಾರಾ ಮೆಡಿಕಲ್ ಕಾಲೇಜ್ ನ ಮೇಘಾ.ಎಸ್.ಬಿ,ಮಂಜೂಳಾ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಜಾಥಾ ಮಾಡುವ ಮೂಲಕ ಸಾಥ ನೀಡಿದರುಆರ್.ಕೆ.ಎಸ್.ಕೆಯ ರಾಮಾಂಜನೇಯ,ಎನ್.ಸಿ.ಡಿ ಕಾರ್ಯಕ್ರಮದ ಮುತ್ತಮ್ಮ,ಎಲ್.ಟಿ.ಓ ಗಾಯತ್ರಿ, ಗ್ರಾಮಾಂತರ ಪ್ರಾಥಮಿಕ ಆರೋಗ್ಯಕೇಂದ್ರದಿಂದ ಬಂದ ಕಿ.ಆ.ನಿರೀಕ್ಷಣಾಧಿಕಾರಿಗಳಾದ ಆರ್.ಹೆಚ್2 ರ ಕಲ್ಮೇಶ,ಜವಳಗೇರಾದ ಅಂಬವ್ವ,ಮಹೇಶ ತುರ್ವಿಹಾಳ ನ ಪರಮೇಶ್ ಪಾಟ್ನೆ,ಬಾದರ್ಲಿಯ ರವಿರಾಜ ನಗರ.ಆ.ಕೇಂದ್ರದ ಪಿ.ಹೆಚ್.ಸಿ.ಓ ಕಮಲಾ,ಶಾಂತಾ ,ಅಂಬಾಮಠದಿಂದ ರೆಡ್ಡೆಪ್ಪಗೌಡ ಸಮುದಾಯ ಆರೋಗ್ಯ ಅಧಿಕಾರಿಗಳು ಹಾಗೂ ನಗರದ ಆಶಾ.ಕಾರ್ಯಕರ್ತೆಯರು ಹಾಜರಿದ್ದರು

## ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಘೋಷಣೆ 100 ವಿದ್ಯಾರ್ಥಿಗಳಿಗೆ ಉಚಿತ ಪಿ.ಯು ಶಿಕ್ಷಣ



**ಬೀದರ್: ಏ.25:**ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ 95ಕ್ಕೂ ಅಧಿಕ ಅಂಕ ಗಳಿಸಿದ ರಾಜ್ಯದ 100 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎರಡು ವರ್ಷದ ಪಿ.ಯು ಶಿಕ್ಷಣ ಉಚಿತವಾಗಿ ನೀಡುವುದಾಗಿ ಇಲ್ಲಿಯ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹ ಪ್ರಕಟಿಸಿದೆ.

100 ಸ್ಥಾನಗಳಲ್ಲಿ 25 ಸ್ಥಾನಗಳನ್ನು ಬೀದರ್ ಸೇರಿದಂತೆ ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು ಎಂದು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ತಿಳಿಸಿದ್ದಾರೆ.

ಉಚಿತ ಸ್ಥಾನಗಳಲ್ಲಿ ಗ್ರಾಮೀಣ ಪ್ರದೇಶದ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ಓದಿದ, ತಂದೆಯನ್ನು ಕಳೆದುಕೊಂಡ ಹಾಗೂ ಅಂಗವಿಕಲ ವಿದ್ಯಾರ್ಥಿಗಳಿಗೆ ಆದ್ಯತೆ ಕೊಡಲಾಗುವುದು ಎಂದು ಹೇಳಿದ್ದಾರೆ. ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಎರಡು ವರ್ಷದ ಬೋಧನಾ ಶುಲ್ಕದ ಸಂಪೂರ್ಣ ರಿಯಾಯಿತಿ ಇರಲಿದೆ. ಅರ್ಹ ವಿದ್ಯಾರ್ಥಿಗಳು ಸಮೂಹದ ಪದವಿ ಪೂರ್ವ ಕಾಲೇಜುಗಳನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವುದು ಉಚಿತ ಶಿಕ್ಷಣ ಯೋಜನೆಯ ಉದ್ದೇಶವಾಗಿದೆ ಎಂದು ಹೇಳಿದ್ದಾರೆ.

**ಎಐಸಿಯುಗೆ ಶೇ 100 ಫಲಿತಾಂಶ**

ಶಾಲೆ ಬಿಟ್ಟ ಹಾಗೂ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಮರಳಿ ಮುಖ್ಯ ವಾಹಿನಿಗೆ ತರಲು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹ ಆರಂಭಿಸಿದ ಶೈಕ್ಷಣಿಕ ತುರ್ತು ನಿಗಾ ಘಟಕ (ಎ.ಐ.ಸಿ.ಯು) ಪರಿಣಾಮಕಾರಿ ಫಲಿತಾಂಶ ನೀಡುತ್ತಾ ಮುನ್ನಡೆದಿದೆ. ಶಾಲೆ ಬಿಟ್ಟ 90 ವಿದ್ಯಾರ್ಥಿಗಳು ಇಲ್ಲಿಯ ಶಾಹೀನ್ ಪ್ರೌಢ ಶಾಲೆಯಲ್ಲಿ ಈ ಬಾರಿಯ ಎಸ್.ಎಸ್. ಎಲ್.ಸಿ ಪರೀಕ್ಷೆ ಬರೆದಿದ್ದರು. ಇವರಲ್ಲಿ 81 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳು ಶಾಹೀನ್ ತುರ್ತು ಶೈಕ್ಷಣಿಕ ನಿಗಾ ಘಟಕದಲ್ಲಿ ಓದಿದವರಾಗಿರುವುದು ವಿಶೇಷ. ಸೌಕರ್ಯಗಳ ಕೊರತೆ ಹಾಗೂ ವೈಫಲ್ಯದಿಂದ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಶೈಕ್ಷಣಿಕ ತುರ್ತು ನಿಗಾ ಘಟಕ ವರದಾನವಾಗಿ ಪರಿಣಮಿಸಿದೆ.

ವಿಶೇಷ ನಿಗಾ ಮೂಲಕ ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಮುಖ್ಯ ವಾಹಿನಿಗೆ ತರುವ ಹಾಗೂ ಅವರಶೈಕ್ಷಣಿಕ ಪ್ರಗತಿಗೆ ನೆರವಾಗುವ ಶಾಹೀನ್‌ನ ಶೈಕ್ಷಣಿಕ ತುರ್ತು ನಿಗಾ ಘಟಕದ ಮಾದರಿಯನ್ನು ಪ್ರಶಂಸಿಸಿರುವ ಜಾಗತಿಕ ಮಟ್ಟದ ನಿಯತಕಾಲಿಕೆಯ ಭಾರತೀಯ ಆವೃತ್ತಿಯಾದ ಫೋ ಇಂಡಿಯಾ, ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರನ್ನು 'ಲೀಡರ್ ಆಫ್ ಟುಮಾರೋ' ಎಂದು ಗುರುತಿಸಿದೆ.

ಇದು, ಈಗ ಶಿಕ್ಷಣ ಕ್ಷೇತ್ರವನ್ನೂ ನೇತೃತ್ವದ ಕೇಂದ್ರವಾಗಿ ಪರಿಗಣಿಸುತ್ತಿರುವುದರ ನಿದರ್ಶನವಾಗಿದೆ.

**ಪ್ರಿ ಪ್ಲಸ್ ಟು ಫೌಂಡೇಷನ್ ಕೋರ್ಸ್**

ಎಸ್.ಎಸ್.ಎಲ್.ಸಿ ಪಾಸ್/ ಫೇಲ್ ಆದ, ಬೇಸಿಕ್‌ನಲ್ಲಿ ದುರ್ಬಲರಾದ, ವಿಷಯಗಳ ಮೇಲೆ ಹಿಡಿತವಿಲ್ಲದ, ಕಾನ್ಸೆಪ್ಟ್ ಅರಿತುಕೊಳ್ಳಲಾಗದ ವಿದ್ಯಾರ್ಥಿಗಳ ನೀಟ್ / ಜೆಇಇ ಕನಸು ಸಾಕಾರಗೊಳಿಸಲು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹ ಮೂರು ವರ್ಷದ ಪ್ರಿ ಪ್ಲಸ್ ಟು ಫೌಂಡೇಷನ್ ಕೋರ್ಸ್ ಸಹ ಆರಂಭಿಸಿದೆ.

ಸಮೂಹವು ಮೂರು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಈ ಕೋರ್ಸ್‌ಗೆ ಶಿಕ್ಷಣ ತಜ್ಞರು ಹಾಗೂ ಪಾಲಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕೋರ್ಸ್‌ನಲ್ಲಿ ಮೊದಲ ವರ್ಷ ಮಕ್ಕಳ ಶೈಕ್ಷಣಿಕ ಅಡಿಪಾಯ ಬಲಪಡಿಸಲಾಗುವುದು. ಎ.ಐ.ಸಿ.ಯು ಮೂಲಕ ಗಣಿತ ಹಾಗೂ ಭಾಷಾ ವಿಷಯುಗಳ ಮೇಲೆ ಹಿಡಿತ ಸಾಧಿಸುವಂತೆ ಮಾಡಲಾಗುವುದು ಎಂದು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ತಿಳಿಸುತ್ತಾರೆ.

ಎ.ಐ.ಸಿ.ಯು ನಲ್ಲಿ ಆರು ಮಕ್ಕಳಿಗೆ ಒಬ್ಬರು ಶಿಕ್ಷಕರು ಇರುವರು. ಆರರಿಂದ ಹತ್ತನೇ ತರಗತಿ ವರೆಗೆ ಗಣಿತ, ವಿಜ್ಞಾನ ಹಾಗೂ ಇಂಗ್ಲಿಷ್ ಅನ್ನು ಸುಧಾರಿಸುವರು. ಇದರಿಂದ ಮಕ್ಕಳಿಗೆ ಬಹು ಆಯ್ಕೆ, ಕಾನ್ಸೆಪ್ಟ್ ಅರ್ಥವಾಗುವುದು. ಗುರಿ ಸ್ಪಷ್ಟವಾಗುವುದು. ಬಳಿಕ ವಿದ್ಯಾರ್ಥಿಗಳಿಗೆ ಪಿಯುಸಿಗೆ ಪ್ರವೇಶ ಕೊಡಲಾಗುವುದು ಎಂದು ಹೇಳುತ್ತಾರೆ.

ಈ ಕೋರ್ಸ್ ದೇಶದ ವಿಶಿಷ್ಟ ಕೋರ್ಸ್ ಆಗಿದೆ. ಇದನ್ನು ಪೂರೈಸಿದ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಮೊದಲ ದಿನದಿಂದಲೇ ಬಹು ಆಯ್ಕೆ ಅಭ್ಯಾಸ ಮಾಡಲು ಆರಂಭಿಸುತ್ತಾರೆ.

ಅವರಲ್ಲಿ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಜೀವನದ ಯಾವುದೇ ಶೈಕ್ಷಣಿಕ ಯಾತ್ರೆಯಲ್ಲಿ ಅವರು ಹಿಂದೆ ಬೀಳುವುದಿಲ್ಲ ಎಂದು ತಿಳಿಸುತ್ತಾರೆ. ಶಾಹೀನ್ ವೆಬ್‌ಸೈಟ್ ್ಣಣಠಿ:// ್ಚಿಜಜಟಿರಡಿಂಣಾಕಿ.ಠಡಿರ ಹಾಗೂ ಟೋಲ್ ಫ್ರೀ ಸಂಖ್ಯೆ 1800 121 6235 ಗೆ ಸಂಪರ್ಕಿಸಿ ಈ ಕುರಿತು ಮಾಹಿತಿ ಪಡೆಯಬಹುದು ಎಂದು ತಿಳಿಸುತ್ತಾರೆ.

## ಶ್ರೀ ನಗರೇಶ್ವರ ದೇವಸ್ಥಾನದಲ್ಲಿ ಶ್ರೀ ವಾಸವಿ ಜಯಂತಿ ಆಚರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಶ್ರೀ ನಗರೇಶ್ವರ ಹಾಗೂ ವಾಸವಿ ದೇವಸ್ಥಾನದಲ್ಲಿ ಶ್ರೀ ವಾಸವಿ ಜಯಂತಿ ಅಂಗವಾಗಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದಿಂದ ಶನಿವಾರ ವಿವಿಧ ಕಾರ್ಯಕ್ರಮಗಳು ನಡೆದವು ಬೆಳಿಗ್ಗೆ ವಾಸವಿ ಕಲ್ಯಾಣ ಮಂಟಪದಲ್ಲಿ ಸಾಮೂಹಿಕವಾಗಿ 102 ದಂಪತಿಗಳಿಂದ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಯಿತು.

ಮಾನವಿ ತಾಲೂಕಿನ ಅರ್ಯವೈಶ್ಯ ಸಮುದಾಯದ ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಅರ್ಯವೈಶ್ಯ ಸಮುದಾಯದ 401 ಮಹಿಳೆಯರಿಗೆ ಮಡಿಲಕ್ಕಿ ಹಾಕಲಾಯಿತು. ವಾಸವಿ ಜಯಂತಿ ಅಂಗವಾಗಿ ಪಟ್ಟಣದ ಅಪರ್ಣ ಚಲನಚಿತ್ರ ಮಂದಿರದಲ್ಲಿ ವಿಶ್ವರೂಪಿಣಿ ಶ್ರೀವಾಸವಿ ಚಲನಚಿತ್ರ ಪ್ರದರ್ಶನ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ, ಕಾರ್ಯದರ್ಶಿ ಬಿ.ಈರಣ್ಣ, ಜಿ.ಲಕ್ಷ್ಮೀ ರಾಮಾಂಜನೇಯ್ಯಶೆಟ್ಟಿ, ಡಿ.ರಾಧಾ ರಾಘವೇಂದ್ರ ಶೆಟ್ಟಿ, ಎಂ.ಶೋಭಾ ಯಂಕಯ್ಯಶೆಟ್ಟಿ,ಆರ್.ಲಕ್ಷ್ಮೀ ಮುತ್ತುರಾಜ್ ಶೆಟ್ಟಿ,ಬಿ,ರಿಂದಾ ರಾಘವೇಂದ್ರ ಶೆಟ್ಟಿ,ಆರ್ ಅಂಬಿಕಾ ಹನುಮೇಶಶೆಟ್ಟಿ ಸೇರಿದಂತೆ ಆರ್ಯವೈಶ್ಯ ಸಮುದಾಯದವರು ಭಾಗವಹಿಸಿದರು.

## ಮಲೇರಿಯಾ ತಡೆಗಟ್ಟುವಿಕೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಸ್ವಚ್ಛತೆ ಮತ್ತು ಆರೋಗ್ಯದ ಮಹತ್ವದ ಕುರಿತು ಸಂದೇಶ




ಧೈರ್ಯದ ದಾರಿ

**ಸಿಂಧನೂರು :** ಸಿಂಧನೂರ್ ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಏಪ್ರಿಲ್ 25ರಂದು ವಿಶ್ವದಾದ್ಯಂತ ಆಚರಿಸಲಾಗುವ ವಿಶ್ವ ಮಲೇರಿಯ ದಿನಾಚರಣೆ ಅಂಗವಾಗಿ ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಲೇರಿಯಾ ರೋಗದ ತಡೆಗಟ್ಟುವಿಕೆ, ಸ್ವಚ್ಛತೆ ಮತ್ತು ಆರೋಗ್ಯ ಜಾಗೃತಿ ಕುರಿತು ನರ್ಸಿಂಗ್, ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರು ಉದ್ಘಾಟಿಸಿ ಮಾತನಾಡಿ, ಮಲೇರಿಯಾ ಒಂದು ಸಾಂಕ್ರಾಮಿಕ ರೋಗವಾಗಿದ್ದು ಪರಿಸರ ಸ್ವಚ್ಛತೆ ಮತ್ತು ಸೊಳ್ಳೆ ನಿಯಂತ್ರಣದ ಮೂಲಕವೇ ಇದನ್ನು ತಡೆಗಟ್ಟಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಲೇರಿಯಾ ಹರಡುವ ವಿಧಾನ, ಲಕ್ಷಣಗಳು, ಮುನ್ನೆಚ್ಚರಿಕೆ ಕ್ರಮಗಳು ಮತ್ತು ಸಮಯಕ್ಕೆ ಚಿಕಿತ್ಸೆ ಪಡೆಯುವ ಅಗತ್ಯತೆ ಕುರಿತು ಮಾಹಿತಿ ನೀಡಿದರು.

**ಮಲೇರಿಯಾ ತಡೆಗಟ್ಟುವ ಪ್ರಮುಖ ವಿಧಾನಗಳಾವೆಂದರೆ**

1. ಪರಿಸರ ನಿರ್ವಹಣೆ

ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು

ಹೂವಿನ ಕುಂಡ, ಫ್ರಿಜ್ ಟ್ರೇ, ಕುಡಿಯುವ ನೀರಿನ ಪಾತ್ರೆಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು

ಮಳೆ ನೀರು ಸಂಗ್ರಹವಾಗುವ ಸ್ಥಳಗಳನ್ನು ಮುಚ್ಚಬೇಕು

ಕಸದ ರಾಶಿ ಮತ್ತು ಮಣ್ಣು ಗುಂಡಿಗಳನ್ನು ತೆರವುಗೊಳಿಸಬೇಕು

2. ಮನೆಮಟ್ಟದ ರಕ್ಷಣಾ ಕ್ರಮಗಳು ಕಿಟಕಿ ಮತ್ತು ಬಾಗಿಲುಗಳಿಗೆ ಜಾಲಿ ಅಳವಡಿಸಿಕೊಳ್ಳಿ ಮಸ್ಕಿಟೋ ಕಾಯಿಲ್, ಲಿಕ್ವಿಡ್ ರಿಪೆಲ್ಲೆಂಟ್ ಅಥವಾ ಸ್ಪ್ರೆ ಬಳಸಿ ಮಲಗುವಾಗ ಸೊಳ್ಳೆ ಜಾಲ ಬಳಸುವುದು ಅತ್ಯುತ್ತಮ ಕ್ರಮ

3. ವೈಯಕ್ತಿಕ ಆರೋಗ್ಯ ಸುರಕ್ಷತೆ ಸಂಜೆ ನಂತರ ಪೂರ್ಣಬಾಹು ಉಡುಪು ಧರಿಸಿ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ವಿಶೇಷ ಜಾಗ್ರತೆ ವಹಿಸಿ ಜ್ವರ ಕಂಡ ತಕ್ಷಣ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ

4. ವೈದ್ಯಕೀಯ ಮುನ್ನೆಚ್ಚರಿಕೆ

ಆರೋಗ್ಯ ಇಲಾಖೆಯ ಸೂಚನೆಗಳನ್ನು ಪಾಲಿಸಿ ಉಚಿತ ಮಲೇರಿಯಾ ಪರೀಕ್ಷಾ ಶಿಬಿರಗಳಲ್ಲಿ ಭಾಗವಹಿಸಿ ವೈದ್ಯರ ಸಲಹೆಯಂತೆ ಪೂರ್ಣ ಔಷಧ ಸೇವನೆ ಮಾಡಬೇಕು.ಮಲೇರಿಯಾ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ ಏಕೆಂದರೆ ಮಲೇರಿಯಾದಿಂದ

ಹಠಾತ್ ಜ್ವರ ಮತ್ತು ನಡುಕ ತಲೆನೋವು ಮತ್ತು ದೇಹ ನೋವು ವಾಂತಿ, ದೌರ್ಬಲ್ಯ

ಬೆವರು ಹೆಚ್ಚು ಬರುತ್ತಿರುವುದುನಂತರ ವಿದ್ಯಾರ್ಥಿಗಳು "ಸ್ವಚ್ಛ ಪರಿಸರ ಆರೋಗ್ಯಕರ ಜೀವನ" ಎಂಬ ಸಂದೇಶದೊಂದಿಗೆ ಜಾಗೃತಿ ಪ್ರತಿಜ್ಞೆ ಸ್ವೀಕರಿಸಿದರು. ಜೊತೆಗೆ ಪೋಸ್ಟರ್ ಪ್ರದರ್ಶನ,ಜಾಗೃತಿ ಘೋಷಣೆಗಳು

"ಸ್ವಚ್ಛ ಗ್ರಾಮ ಮಲೇರಿಯಾ ರಹಿತ ಜೀವನ"

"ಸೊಳ್ಳೆ ಇಲ್ಲದ ಪರಿಸರವೇ ಆರೋಗ್ಯದ ಆಧಾರ"

"ನಾವು ಜಾಗರೂಕರಾದರೆ ಮಲೇರಿಯಾ ದೂರವಾಗುತ್ತದೆ"

ಕಾರ್ಯಕ್ರಮಗಳಲ್ಲಿ ಬಳಸಬಹುದಾದ ಸಂದೇಶ

"ಮಲೇರಿಯಾ ತಡೆಗಟ್ಟುವುದು ಕೇವಲ ಆರೋಗ್ಯ ಇಲಾಖೆಯ ಹೊಣೆಗಾರಿಕೆ ಅಲ್ಲ; ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಸ್ವಚ್ಛತೆ, ಜಾಗೃತಿ ಮತ್ತು ಸಮಯಕ್ಕೆ ಚಿಕಿತ್ಸೆ ಪಡೆಯುವ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಿಸೋಣ." ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಲಾಜರ ಸಿರಿಲ್ , ಉಪನ್ಯಾಸಕರಾದ ವೀರೇಶ್ ಸಂತೋಷಿ, ಶೋಭಾ ವೀರೇಶ್ವರಿ, ಸುಧಾ, ಅಶುಪಾಷಾ , ರಾಜೇಶ್ , ಚೈತ್ರ, ಸನ್ ರೈಸ್ ಕಾಲೇಜ್ ನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ: ಸಚಿವ ಬೋಸರಾಜು ತೀವ್ರ ಅಸಮಾಧಾನ



ಧೈರ್ಯದ ದಾರಿ

**ರಾಯಚೂರು:** ನಗರದಲ್ಲಿ ನಡೆಯುತ್ತಿರುವ ಅಮೃತ್-2 ಹಾಗೂ ಜೆಜೆಎಂ ಯೋಜನೆಯ ಕಾಮಗಾರಿಗಳ ವಿಳಂಬದಿಂದ ಮಾನ್ವಿ ನಗರ ಪ್ರದೇಶದಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿ ಇಂದು ಬೆಳಿಗ್ಗೆ ಮಹತ್ವದ ಸಭೆ ನಡೆಯಿತು.

ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ ಸಭಾ ನಾಯಕರಾದ ಶ್ರೀ ಎನ್.ಎಸ್. ಬೋಸರಾಜು ಅವರು ತಮ್ಮ ನಿವಾಸದಲ್ಲಿ ಅಧಿಕಾರಿಗಳು ಮತ್ತು ಗುತ್ತೇದಾರರೊಂದಿಗೆ ಚರ್ಚೆ ನಡೆಸಿದರು.

ಸಭೆಯಲ್ಲಿ ಕರ್ನಾಟಕ ಕುಡಿಯುವ ನೀರು ಸರಬರಾಜು ಮಂಡಳಿಯ ಇಇ ಗುರುರಾಜ್, ಎಇಇ ಚೌವಣ್ ಹಾಗೂ ಗುತ್ತೇದಾರ ಗೌರವ್ ಉಪಸ್ಥಿತರಿದ್ದರು.

ನಗರದ ಮಲ್ಲಿಕಾರ್ಜುನ್ ಚಿತ್ರಮಂದಿರದ ಮುಂಭಾಗದಿಂದ ಬಸವ ವೃತ್ತದವರೆಗೆ ನಡೆ ಯುತ್ತಿರುವ ಕಾಮಗಾರಿಗಳ ಪರಿಣಾಮವಾಗಿ ಮಾನ್ವಿ ನಗರದ ನಮಾಜ್ ಗೆರಗುಡ್ಡ ಮತ್ತು ವಿಠಲ್ ನಗರದಲ್ಲಿನ ನೀರು ಸಂಗ್ರಹಣಾ ಟ್ಯಾಂಕ್‌ಗಳಿಂದ ನೀರು ಸರಬರಾಜಾಗು ತ್ತಿರುವ ವಾರ್ಡ್‌ಗಳಿಗೆ ತೊಂದರೆ ಉಂಟಾಗಿದೆ. ಇದರ ಪರಿಣಾಮವಾಗಿ ವಾರ್ಡ್ ಸಂಖ್ಯೆ 1, 2, 3, 4, 18, 19, 20, 25, 26, 27 ಸೇರಿದಂತೆ ಸುಮಾರು 10 ರಿಂದ 12 ವಾರ್ಡ್‌ಗಳಲ್ಲಿ ನೀರಿನ ಸರಬರಾಜು ಅಸ್ಥಿರವಾಗಿದೆ.

ಕಾಮಗಾರಿ ವಿಳಂಬದಿಂದ ಜನರಿಗೆ ಆಗುತ್ತಿರುವ ಅನಾನುಕೂಲತೆ ಕುರಿತು ಸಚಿವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಪರಿಸ್ಥಿತಿಯಿಂದ ಜನರು ಆಕ್ರೋಶ ವ್ಯಕ್ತಪಡಿಸುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಸೂಚಿಸಿದರು.

ತಕ್ಷಣವೇ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿದು, ನೀರಿನ ಸರಬರಾಜು ನಿಯಮಿತಗೊಳಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳು ಹಾಗೂ ಗುತ್ತೇದಾರರಿಗೆ ಸಚಿವರು ಕಠಿಣ ಸೂಚನೆ ನೀಡಿದರು.

# ರಣವೀರ್ ಸಿಂಗ್ ಬೇಷರತ್ ಕ್ಷಮೆಯಾಚನೆ



**ಬೆಂಗಳೂರು,ಏ.25–** ದೈವಕ್ಕೆ ಅಪಮಾನ ಮಾಡಿ ಸಮಸ್ಯೆಗೆ ಸಿಲುಕಿದ್ದ ರಣವೀರ್ ಸಿಂಗ್ ಅವರು ಬೇಷರತ್ ಕ್ಷಮೆಯಾಚಿಸಿ ಇನ್ನು ಮುಂದೆ ಈ ರೀತಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲ್ಲ ಎಂದು ಹೇಳಿದ್ದಾರೆ.

ಬಾಲಿವುಡ್ ನಟ ರಣವೀರ್ ಸಿಂಗ್ ಕಾರ್ಯಕ್ರಮವೊಂದರಲ್ಲಿ ಕಾಂತಾರ ಚಿತ್ರದ ನಟನ ಮುಂದೆ ಮಾಡಿದ್ದ ದೈವ ಅಪಚಾರಕ್ಕೆ ಈಗ ಬೆಲೆ ತೆರುವಂತಾಗಿದೆ. ಕೋರ್ಟ್ ನಿರ್ದೇಶನದ ಮೇಲೆ ರಣವೀರ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಎಫ್‌ಐಆರ್ ರದ್ದು ಮಾಡುವುದಕ್ಕೆ ಹೈಕೋರ್ಟ್ ಮೊರೆ ಹೋಗಿದ್ದ ರಣವೀರ್ ಇದೀಗ ಬೇಷರತ್ ಕ್ಷಮೆಯಾಚಿಸಿದ್ದಾರೆ.

ಇನ್ನು ಯಾವ ಧರ್ಮದ ಬಗ್ಗೆಯೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಧಕ್ಕೆ ತರುವುದಿಲ್ಲ ಎಂದು ಕ್ಷಮೆಯಾಚಿಸಿದ್ದಾರೆ. ಈ ಘಟನೆ ಉದ್ದೇಶಪೂರ್ವಕವಾಗಿ ಆಗಿರೋದಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ.

ಇನ್ನು ಇಂದು ಅರ್ಜಿ ವಿಚಾರಣೆ ನಡೆಯುವ ಸಂದರ್ಭದಲ್ಲಿ ದೂರುದಾರ ಪರ ವಕೀಲರು ರಣವೀರ್ ಸಿಂಗ್ ಯಾವಾಗ ಚಾಮುಂಡಿ ಬೆಟ್ಟಕ್ಕೆ ಬಂದು ಕ್ಷಮೆಯಾಚಿಸ್ತಾರೆ ಎಂದು ಪ್ರಶ್ನೆ ಮಾಡಿದರು. ಇದಕ್ಕೆ ರಣವೀರ್ ಪರ ವಕೀಲ ಸಜ್ಜನ್ ಪೂವಯ್ಯ ಸೆಕ್ಯೂರಿಟಿ ಸಮಸ್ಯೆ ಇದೆ ಎಂದು ಹೇಳಿದರು, ಪೊಲೀಸರ ಬದಲಾಗಿ ಖಾಸಗಿ ಬಾಡಿಗಾರ್ಡ್ ಇಟ್ಟುಕೊಂಡು ಬೆಟ್ಟಕ್ಕೆ ಹೋಗಿ ಎಂದಿದ್ದಕ್ಕೆ, ಕೋರ್ಟ್ ಬೇಸರ ವ್ಯಕ್ತ ಪಡಿಸಿದೆ. ರಾಜ್ಯ ಪೊಲೀಸರು ನೈಜ್ಯ ತನಿಖೆ ಮಾಡುವುದನ್ನು ಬಿಟ್ಟಿದ್ದಾರೆ. ಕೇವಲ ಲಿವ್ ಇನ್ ರಿಲೇಷನ್ ಶಿಪ್ ಹಿಂದೆ ಹೋಗುತ್ತಿದ್ದಾರೆ ಎಂದಿದ್ದಾರೆ.

ಇನ್ನು ಇದೇ ವಿಚಾರಕ್ಕೆ ಸುದೀರ್ಘವಾದ ವಿಚಾರಣೆ ನಡೆಸಿದ ನ್ಯಾಯಾಲಯ ಬೇಷರತ್ ಕ್ಷಮೆ ಸ್ವೀಕಾರ ಮಾಡಿ ಅರ್ಜಿ ಇತ್ಯರ್ಥಪಡಿಸಿದೆ. ಈ ಮೂಲಕ ಮುಜುಗರಕ್ಕೆ ಸಿಲುಕಿದ್ದ ರಣವೀರ್‌ಗೆ ರಿಲೀಫ್ ಸಿಕ್ಕಿದೆ.

# ಟಿಆರ್‌ಎಸ್ ಹೊಸ ಪಕ್ಷ ರಚಿಸಿದ ಕವಿತಾ



**ಹೈದರಾಬಾದ್ (ತೆಲಂಗಾಣ),ಏ.25–** ತೆಲಂಗಾಣ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಪುತ್ರಿ ಮತ್ತು ಮಾಜಿ ಸಂಸದೆ ಕೆ. ಕವಿತಾ ತಮ್ಮ ಹೊಸ ರಾಜಕೀಯ ಪಕ್ಷವನ್ನು ಘೋಷಿಸಿದ್ದಾರೆ. ಅವರ ಪಕ್ಷಕ್ಕೆ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎಂದು ಹೆಸರಿಸಲಾಗಿದೆ. ಅವರ ತಂದೆ ಹಿಂದೊಮ್ಮೆ ಅದೇ ಹೆಸರಿನಲ್ಲಿ ತೆಲಂಗಾಣ ಚಳವಳಿಯನ್ನು ಪ್ರಾರಂಭಿಸಿದ್ದರು.

ಕಳೆದ ವರ್ಷ ಬಿಆರ್‌ಎಸ್ ಪಕ್ಷದಿಂದ ಉಚ್ಚಾಟನೆಗೊಂಡಿದ್ದ ಕೆ. ಕವಿತಾ ಅವರು ಈಗ ಹೊಸ ಪಕ್ಷವನ್ನು ರಚಿಸಿದ್ದಾರೆ. ಪಕ್ಷವನ್ನು ತೊರೆದ ಏಳು ತಿಂಗಳ ನಂತರ, ಅವರು ಇಂದು 'ತೆಲಂಗಾಣ ರಾಷ್ಟ್ರ ಸೇನಾ' (ಟಿಆರ್‌ಎಸ್) ಪಕ್ಷವನ್ನು ಘೋಷಿಸಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದ ಪಕ್ಷದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಹೊಸ ಪಕ್ಷದ ಹೆಸರು ಟಿಆರ್‌ಎಸ್ ಎಂದು ಹೇಳಿ ರಾಜ್ಯದ ಆಕಾಂಕ್ಷೆಗಳನ್ನು ಈಡೇರಿಸುವ ಮತ್ತು ಅಪೂರ್ಣ ಕಾರ್ಯಸೂಚಿಯನ್ನು ಪೂರ್ಣಗೊಳಿಸುವ ಗುರಿಯೊಂದಿಗೆ ಹೊಸ ಪ್ರಾದೇಶಿಕ ಪಕ್ಷವನ್ನು ರಚಿಸಲಾಗುವುದು ಎಂದು ಕವಿತಾ ಶುಕ್ರವಾರ ಘೋಷಿಸಿದ್ದರು.

ನಾನು ಮತ್ತು ನನ್ನ ಬೆಂಬಲಿಗರು ಸ್ವಯಂಪ್ರೇರಣೆಯಿಂದ ಪಕ್ಷವನ್ನು ತೊರೆದಿಲ್ಲ. ನಮ್ಮನ್ನು ಪಕ್ಷದಿಂದ ಹೊರಹಾಕಲಾಯಿತು. ತೆಲಂಗಾಣದ ಪ್ರಾದೇಶಿಕ ಆಕಾಂಕ್ಷೆಗಳನ್ನು ಈಡೇರಿಸಲು ಬಿಆರ್‌ಎಸ್ ಪಕ್ಷವನ್ನು ರಚಿಸಲಾಯಿತು. ಆದರೆ ಅವರು ಪಕ್ಷದ ಹೆಸರು, ಕೆಲಸ ಮತ್ತು ಚೈತನ್ಯವನ್ನೇ ಬದಲಾಯಿಸಿದರು, ಅದು ಪಕ್ಷದ ಜನರೊಂದಿಗಿನ ಸಂಪರ್ಕವನ್ನು ಮುರಿದಿದೆ. ಒಂದು ಪಕ್ಷವು ಅದರ ಮೂಲ ಮೌಲ್ಯಗಳಿಂದ ವಿಮುಖವಾದಾಗ, ಅದರ ಮೂಲ ಉದ್ದೇಶ ಉಳಿಯಲು ಸಾಧ್ಯವಿಲ್ಲ. ತೆಲಂಗಾಣದ ಈಡೇರದ ಕಾರ್ಯಸೂಚಿ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ನಮಗೆ ಪ್ರಾದೇಶಿಕ ಪಕ್ಷ ಬೇಕು ಮತ್ತು ನಮ್ಮ ಪಕ್ಷವೇ ಅದಕ್ಕೆ ಉತ್ತರವಾಗಿರುತ್ತದೆ ಎಂದು ಅವರು ಹೇಳಿದ್ದಾರೆ.

ನನ್ನ ತಂದೆಯ ಪಕ್ಷದಿಂದ ನನ್ನನ್ನು ಹೊರಹಾಕಲಾಗಿದೆ. ನಾನು ಆ ಪಕ್ಷಕ್ಕೆ ಹಿಂತಿರುಗಲು ಬಯಸುವುದಿಲ್ಲ. ಆದರೆ, ನಾನು ತೆಲಂಗಾಣದ ಮಗಳು. ನನ್ನಲ್ಲಿ ತೆಲಂಗಾಣ ರಕ್ತವಿದೆ. ನನಗೆ ಗಟ್ಟಿತನವಿದೆ. ನಾವು ತುಂಬಾ ಹಠಮಾರಿ ಮತ್ತು ನಮ್ಮ ಉದ್ದೇಶಕ್ಕೆ ಬದ್ಧರಾಗಿದ್ದೇವೆ. ನಾವು ನಮ್ಮ ಜೀವನದ 20 ವರ್ಷಗಳನ್ನು ತೆಲಂಗಾಣ ಚಳುವಳಿಯಲ್ಲಿ ಕಳೆದಿದ್ದೇವೆ. ತೆಲಂಗಾಣವನ್ನು ಅಭಿವೃದ್ಧಿಪಡಿಸಲು, ಅದರ ಆಕಾಂಕ್ಷೆಗಳನ್ನು ಪೂರೈಸಲು, ನಮ್ಮ ಹಳೆಯ ಪಕ್ಷ ನಮ್ಮೊಂದಿಗಿರಲಿ ಅಥವಾ ಇಲ್ಲದಿರಲಿ, ನಮ್ಮ ಕುಟುಂಬ ನಮ್ಮೊಂದಿಗಿರಲಿ ಅಥವಾ ಇಲ್ಲದಿರಲಿ, ತೆಲಂಗಾಣದ ಜನರು ನನ್ನ ಕುಟುಂಬ ಎಂದು ನಾನು ನಂಬುತ್ತೇನೆ. ತೆಲಂಗಾಣದ ಮಣ್ಣು ನಮ್ಮನ್ನು ಮುನ್ನಡೆಸುತ್ತದೆ ಎಂದು ಅವರು ಹೇಳಿದರು.

ಪಕ್ಷ ರಚನೆಯಾಗುವ ಮೊದಲು, ಹೈದರಾಬಾದ್‌ನ ಗನ್ ಪಾರ್ಕ್‌ನಲ್ಲಿರುವ ಅಮರವೀರುಲ ಸ್ತೂಪದಲ್ಲಿ ಮಾಲಾರ್ಪಣೆ ಮಾಡುವ ಮೂಲಕ ಕವಿತಾ 1969 ರ ತೆಲಂಗಾಣ ಸ್ವಾತಂತ್ರ್ಯ ಚಳವಳಿಯ ಹುತಾತ್ಮರಿಗೆ ಗೌರವ ಸಲ್ಲಿಸಿದರು.
ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಅವರನ್ನು ಸೆಪ್ಟೆಂಬರ್ 2025 ರಲ್ಲಿ ಬಿಆರ್‌ಎಸ್‌ನಿಂದ ಹೊರಹಾಕಲಾಯಿತು. ಗಮನಾರ್ಹವಾಗಿ, ಕವಿತಾ ಅವರ ತಂದೆ, ತೆಲಂಗಾಣ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಸ್ಥಾಪಿಸಿದ್ದರು. ಅದೇ ಪಕ್ಷವನ್ನು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂದು ಮರುನಾಮಕರಣ ಮಾಡಲಾಗಿದೆ.

# ಹರ್ಭಜನ್ ಜೊತೆಗಿನ ಸಂಬಂಧ ಕಡಿದ ಶ್ರೀಶಾಂತ್



**ನವದೆಹಲಿ,ಏ.25–**ಐಪಿಎಲ್ 2008 ರಲ್ಲಿ ಎಸ್. ಶ್ರೀಶಾಂತ್ ಮತ್ತು ಹರ್ಭಜನ್ ಸಿಂಗ್ ನಡುವಿನ ವಾಗ್ವಾದವು ಕ್ರಿಕೆಟ್ ಇತಿಹಾಸದಲ್ಲಿ ಹೆಚ್ಚು ಚರ್ಚಿಸಲ್ಪಟ್ಟ ಕ್ಷಣಗಳಲ್ಲಿ ಒಂದಾಗಿದೆ. ಘಟನೆ ನಡೆದು 18 ವರ್ಷಗಳು ಕಳೆದಿವೆ, ಆದರೆ ಇದು ಅಭಿಮಾನಿಗಳು ಮತ್ತು ಮಾಧ್ಯಮಗಳಿಂದ ಗಮನ ಸೆಳೆಯುತ್ತಲೇ ಇದೆ. ಹರ್ಭಜನ್ ತಮ್ಮ ತಪ್ಪಿಗೆ ಪದೇ ಪದೇ ಕ್ಷಮೆಯಾಚಿಸಿದ್ದಾರೆ.ಇತ್ತೀಚಿನ ಸಂದರ್ಶನವೊಂದರಲ್ಲಿ, ಶ್ರೀಶಾಂತ್ ಅವರು ಹರ್ಭಜನ್ ಅವರೊಂದಿಗಿನ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡಿರುವುದಾಗಿ ಬಹಿರಂಗಪಡಿಸಿದ್ದಾರೆ. ಹರ್ಭಜನ್ ಈ ಘಟನೆಯನ್ನು ವಾಣಿಜ್ಯ ವಸ್ತುವನ್ನಾಗಿ ಪರಿವರ್ತಿಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.ಹರ್ಭಜನ್ ಬಗ್ಗೆ ತಾನು ಎಂದಿಗೂ ಮಾತನಾಡಿಲ್ಲ, ಆದರೆ ಈಗ ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದೇನೆ ಎಂದು ಶ್ರೀಶಾಂತ್ ಬಹಿರಂಗಪಡಿಸಿದ್ದಾರೆ.

ಅವರ ವಾಗ್ವಾದವನ್ನು ಉಲ್ಲೇಖಿಸುವ ಇತ್ತೀಚಿನ ಜಾಹೀರಾತನ್ನು ಉಲ್ಲೇಖಿಸಿ ಹರ್ಭಜನ್ ಜಾಹೀರಾತಿನಿಂದ ಸುಮಾರು 1 ಕೋಟಿ ಗಳಿಸಿದ್ದಾರೆ ಮತ್ತು ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಚಾರ ಮಾಡಲು ಕೇಳಿಕೊಂಡಿದ್ದಾರೆ, ಅದು ತಮ್ಮನ್ನು ಅಸಮಾಧಾನಗೊಳಿಸಿದೆ ಎಂದು ಶ್ರೀಶಾಂತ್ ಹೇಳಿದ್ದಾರೆ.

ಇತ್ತೀಚೆಗೆ ಯಾವುದೇ ಸಮಸ್ಯೆ ಇರಲಿಲ್ಲ, ಆದರೆ ಅವರು ಅದನ್ನು ಮತ್ತೆ ಪ್ರಚಾರ ಮಾಡಿದ್ದು ಅವರು ಅದರಿಂದ ಸುಮಾರು 80 ಲಕ್ಷದಿಂದ 1 ಕೋಟಿ ರೂ. ಗಳಿಸಿದ್ದಾರೆ. ನಂತರ ಅವರು ನನಗೆ ಕರೆ ಮಾಡಿ ಅದನ್ನು ಪ್ರಚಾರ ಮಾಡಲು ಕೇಳಿದರು. ನಾನು, 'ನಾನು ಕ್ಷಮಿಸುತ್ತೇನೆ, ಆದರೆ ನಾನು ಎಂದಿಗೂ ಮರೆಯುವುದಿಲ್ಲ' ಎಂದು ಹೇಳಿದೆ. ಯಾರಾದರೂ ನಿಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿದರೆ, ನೀವು ಕ್ಷಮಿಸಬೇಕು, ಆದರೆ ಎಂದಿಗೂ ಮರೆಯಬೇಡಿ. ನೀವು ಮರೆತರೆ, ಅವರು ಮತ್ತೆ ಅದೇ ತಪ್ಪನ್ನು ಮಾಡುತ್ತಾರೆ. ಅದು ಅದಕ್ಕೆ ಒಂದು ದೊಡ್ಡ ಉದಾಹರಣೆ. ಅದರಲ್ಲಿ ಯಾವುದೇ ಸಂದೇಹವಿಲ್ಲ," ಎಂದು ಅವರು ಹೇಳಿದರು.
ಘಟನೆಯ ನಂತರ ಹರ್ಭಜನ್ ಮತ್ತು ಶ್ರೀಶಾಂತ್ ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡರು, ಆದರೆ ಶ್ರೀಶಾಂತ್ ಈಗ ಹರ್ಭಜನ್ ಜೊತೆ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಅವರು ಇನ್ಸ್ಟಾಗ್ರಾಮ್ನಲ್ಲಿ ಹರ್ಭಜನ್ ಅವರನ್ನು ಬ್ಲಾಕ್ ಮಾಡಿದ್ದಾರೆ ಎಂದು ಬಹಿರಂಗಪಡಿಸಿದ್ದಾರೆ.

ಹರ್ಭಜನ್ ಸಿಂಗ್ ತಮ್ಮ ತಪ್ಪನ್ನು ಒಪ್ಪಿಕೊಳ್ಳಲು ಎಂದಿಗೂ ಹಿಂಜರಿದಿಲ್ಲ ಮತ್ತು ಶ್ರೀಶಾಂತ್ ಬಳಿ 200 ಬಾರಿ ಕ್ಷಮೆಯಾಚಿಸಿದ್ದೇನೆ ಎಂದು ಬಹಿರಂಗಪಡಿಸಿದ್ದಾರೆ.ರವಿಚಂದ್ರನ್ ಅಶ್ವಿನ್ ಅವರೊಂದಿಗಿನ ತಮ್ಮ ಯೂಟ್ಯೂಬ್ ಪಾಡ್ಕ್ಯಾಸ್ಟ್ 'ಕುಟ್ಟಿ ಸ್ಟೋರೀಸ್ ವಿತ್ ಆಶ್' ನಲ್ಲಿ, ಹರ್ಭಜನ್ ಹೀಗೆ ಹೇಳಿದರು: "ನನ್ನ ಜೀವನದಲ್ಲಿ ನಾನು ಬದಲಾಯಿಸಲು ಬಯಸುವ ಒಂದು ವಿಷಯವೆಂದರೆ ಶ್ರೀಶಾಂತ್ ಜೊತೆಗಿನ ಆ ಘಟನೆ. ಆ ಘಟನೆಯನ್ನು ನನ್ನ ವೃತ್ತಿಜೀವನದಿಂದ ಅಳಿಸಿಹಾಕಲು ನಾನು ಬಯಸುತ್ತೇನೆ. ಅದು ನನ್ನ ಪಟ್ಟಿಯಿಂದ ನಾನು ಬದಲಾಯಿಸಲು ಬಯಸುವ ಘಟನೆ." ಅವರು ಹೇಳಿದ್ದಾರೆ.

# ಶಿಕ್ಷೆಗೆ ತಡೆ ಕೋರಿ ಹೈಕೋರ್ಟ್‌ಗೆ ವಿನಯ್ ಮೊರೆ



**ಬೆಂಗಳೂರು,ಏ.25–** ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಜೈಲು ಪಾಲಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಹೈಕೋರ್ಟ್ ಮೊರೆ ಹೋಗಿದ್ದಾರೆ.ಸೆಷನ್ಸ್ ಕೋರ್ಟ್ ವಿಧಿಸಿದ ಜೀವಾವಧಿ ಶಿಕ್ಷೆಯನ್ನು ಪ್ರಶ್ನಿಸಿ, ಅದರ ಜಾರಿಗೆ ತಾತ್ಕಾಲಿಕ ತಡೆ ನೀಡುವಂತೆ ವಿನಯ್ ಕುಲಕರ್ಣಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಸೆಷನ್ಸ್ ಕೋರ್ಟ್ ಕೊಟ್ಟಿರುವ ಜೀವಾವಧಿ ಶಿಕ್ಷೆಯ ಅಮಾನತು ಹಾಗೂ ತೀರ್ಪಿಗೆ ತಡೆಯಾಜ್ಞೆ ನೀಡುವಂತೆ ಕೋರಿ ಸಲ್ಲಿಸಿರುವ ಈ ಅರ್ಜಿಯು ಏ.27ರಂದು ವಿಚಾರಣೆಗೆ ಬರುವ ಸಾಧ್ಯತೆಯಿದೆ.

ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಮಾತ್ರವಲ್ಲದೆ, ಸಹ ಆರೋಪಿಯಾಗಿರುವ ಚಂದ್ರಶೇಖರ್ ಇಂಡಿ ಕೂಡ ತಮ್ಮ ಮೇಲ್ಮನವಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ. ಸೆಷನ್ಸ್ ಕೋರ್ಟ್ ತೀರ್ಪಿನ ಬಳಿಕ ಜೀವಾವಧಿ ಶಿಕ್ಷೆಗೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿರುವ ವಿನಯ್ ಕುಲಕರ್ಣಿ, ಇದೀಗ ಕಾನೂನು ಹೋರಾಟದ ಮೂಲಕ ನ್ಯಾಯಾಲಯದಿಂದ ಪರಿಹಾರ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಜೀವಾವಧಿ ಶಿಕ್ಷೆಗೆ ತಾತ್ಕಾಲಿಕ ತಡೆ ಪಡೆಯುವ ಮೂಲಕ ತಮ್ಮ ಶಾಸಕ ಸ್ಥಾನವನ್ನು ಉಳಿಸಿಕೊಳ್ಳಲು ವಿನಯ್ ಕುಲಕರ್ಣಿ ಯತ್ನಿಸುತ್ತಿದ್ದಾರೆ ಎನ್ನಲಾಗಿದೆ.ಹೈಕೋರ್ಟ್‌ನಲ್ಲಿ ನಡೆಯಲಿರುವ ವಿಚಾರಣೆ ಈ ಪ್ರಕರಣದ ಮುಂದಿನ ದಿಕ್ಕನ್ನು ನಿರ್ಧರಿಸಲಿದೆ ಎಂಬುದರಿಂದ, ನ್ಯಾಯಾಂಗದ ತೀರ್ಪಿನತ್ತ ಎಲ್ಲರ ಕಣ್ಣು ನೆಟ್ಟಿದೆ.

ಶಾಸಕ ವಿನಯ್ ಕುಲಕರ್ಣಿ ಸೇರಿ 16 ಆರೋಪಿಗಳಿಗೆ ಏಪ್ರಿಲ್ 17ರಂದು ಸೆಷನ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು. ಅಲ್ಲದೆ ಒಬ್ಬ ಅಪರಾಧಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಒಂದು ವೇಳೆ ಸೆಷನ್ ಕೋರ್ಟ್ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡದರೆ.
ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಕಾನೂನಿನಲಿ ಅವಕಾಶವಿದೆ.

# ಮಲೇರಿಯಾ ಬಗ್ಗೆ ಮುಂಜಾಗ್ರತೆ ವಹಿಸುವುದು ಅಗತ್ಯ



**ಕಲಬುರಗಿ :ಏ.25:**ಚಳಿ,ಜ್ವರ,ನಡುಕಇವುಗಳ ಮಲೇರಿಯಾದ ಪ್ರಮುಖ ಲಕ್ಷಣಗಳಾಗಿದ್ದು, ಇವುಗಳು ಕಂಡುಬಂದರೆನಿರ್ಲಕ್ಷ ಮಾಡದೆ, ತಕ್ಷಣರಕ್ತ ಪರೀಕ್ಷೆ ಮಾಡಿಸಿ ಅದಕ್ಕೆ ಸೂಕ್ತವಾದಚಿಕಿತ್ಸೆ ಪಡೆದುಕೊಳ್ಳಬೇಕು. ಮಲೇರಿಯಾದ ಬಗ್ಗೆ ಭಯ ಪಡೆ, ಮುಂಜಾಗ್ರತೆ ವಹಿಸಿ ಎಂದುವೈದ್ಯಾಧಿಕಾರಿಡಾ.ಅನುಪಮಾಎಸ್.ಕೇಶ್ವಾರ ಸಲಹೆ ನಿಡಿದರು.
ನಗರದಶೇಖರೋಜಾದಲ್ಲಿರುವ 'ಶಹಾಬಜಾರ ನಗರ ಪ್ರಾಥಮಿಕ ಆರೋಗ್ಯಕೇಂದ್ರ' ದಲ್ಲಿ'ಬಸವೇಶ್ವರ ಸಮಾಜ ಸೇವಾ ಬಳಗ'ದ ಸಹಯೋಗದೊಂದಿಗೆಶನಿವಾರಜರುಗಿದ 'ವಿಶ್ವಮಲೇರಿಯಾದಿನಾಚರಣೆ'ಯಲ್ಲಿಅವರುಮಾತನಾಡುತ್ತಿದ್ದರು.
ಸೋಂಕಿತಅನಾಫಿಲೀಸ್ ಸೊಳ್ಳೆ ಕಚ್ಚುವುದರಿಂದ ಮಲೇರಿಯಾಕಾಯಿಲೆ ಬರುತ್ತದೆ. ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಮನೆ ಸುತ್ತ ನೀರು ಸಂಗ್ರಹವಾಗದಂತೆ ನೋಡಿಕೊಂಡು ಸ್ವಚ್ಛತೆಯನ್ನುಕಾಪಾಡುವುದು, ನೀರಿನ ಸಂಗ್ರಹಗಳನ್ನು ಭದ್ರವಾಗಿಮುಚ್ಚಿಡುವುದು, ಸೊಳ್ಳೆ ಪರದೆ ಮತ್ತುನಿರೋಧಕಗಳನ್ನು ಬಳಸುವುದು, ಕಾಯಿಸಿ, ಆರಿಸಿದ ಶುದ್ಧವಾದ ನೀರನ್ನುಕುಡಿಯುವುದು, ಸಮತೋಲಿತಆಹಾರವನ್ನು ಸೇವಿಸುವುದು, ಮಳೆಯಲ್ಲಿ ನೆನೆಯದಂತೆ ಲಕ್ಷ ವಹಿಸುವುದು ಸೇರಿದಂತೆ ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವದರ ಮೂಲಕ ಮಲೇರಿಯಾ ಕಾಯಿಲೆ ಬರದಂತೆತಡೆಯಬಹುದಾಗಿದೆಎಂದು ಅನೇಕ ಮುಂಜಾಗ್ರತಾ ಕ್ರಮಗಳನ್ನು ತಿಳಿಸಿದರು.
ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಆರೋಗ್ಯಕೇಂದ್ರದ ಸಿಬ್ಬಂದಿಗಳಾದ ಜಗನಾಥಗುತ್ತೇದಾರ, ಗಂಗಾಜ್ಯೋತಿಗಂಜಿ, ರೇಶ್ಮಾ ನಕ್ಕುಂದಿ, ಅರ್ಚನಾ ಸಿಂಗೆ, ಮಂಗಲಾ ಚಂದಾಪುರೆ, ಚಂದ್ರಕಲಾ ಮಠಪತಿ, ಮರಲಿಂಗಮ್ಮ ಭಾವಿಮನಿ, ಶ್ರೀದೇವಿ ಸಾಗರ, ಕಾರ್ತಿಕ ನಕ್ಕುಂದಿ ಸೇರಿದಂತೆ ಮತ್ತಿತರರಿದ್ದರು.


## ರಾಜ್ಯ ಸರ್ಕಾರ ಜನ ಸಾಮಾನ್ಯರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ: ಕೇಂದ್ರ ಸಚಿವ ಹೆಚ್.ಡಿ.ಕೆ



**ಕೆ.ಆರ್.ನಗರ,ಏ.25:–** ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಇಂದು ನಡೆಯಿತ್ತಿರುವ ವಿವಿದ ಕಾರ್ಯಕ್ರಮಗಳಿಗೆ ಸಂಸದರ ನಿಧಿಯಿಂದ 20 ಕೋಟಿ ಅನುದಾನ ನೀಡಿದ್ದೇನೆ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.ಪಟ್ಟಣದ ತಾಲೂಕು ಪಂಚಾಯತಿ ಕಚೇರಿಯ ಆವರಣದಲ್ಲಿ ಸಂಸದರ ನಿಧಿಯಿಂದ 126 ವಿಕಲಚೇತನರಿಗೆ ವ್ಹೀಲ್ ಚೇರ್, ತ್ರಿಚಕ್ರದ ಸೈಕಲ್, ವಾಕಿಂಗ್ ಸ್ಟಿಕ್, ಶ್ರಾವಣ ಸಾಧನ ವಿತರಣೆ ಹಾಗೂ 155 ಅಗತ್ಯ ಸಾಧನ ಸಲಕರಣೆಗಳ ವಿತರಣೆ ನೆರವೇರಿಸಿ ಮಾತನಾಡಿದರು.

ಈಗಿನ ಸರ್ಕಾರ ಅಭಿವೃದ್ಧಿ ಕಡೆ ಗಮನ ಹರಿಸದೇ ಜನ ಸಾಮಾನ್ಯರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರು.ವಿವಿದ ಅಭಿವೃದ್ಧಿ ಯೋಜನೆಗಳು ನೆನೆಗುದ್ದಿಗೆ ಬಿದ್ದಿದೆ ಎಂದರಲ್ಲದೆ ಈ ಸರ್ಕಾರಕ್ಕೆ ಮಾನವೀಯ ಮೌಲ್ಯಗಳು ಬೇಡವಾಗಿದೆ ಎಂದರು.ಈ ಸರ್ಕಾರದಲ್ಲಿ ಯುವಕರಿಗೆ ಉದ್ಯೋಗ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಕುಮಾರಸ್ವಾಮಿ ಅವರು ನಾನು ಮೊದಲ ಬಾರಿಗೆ 2006 ರಲ್ಲಿ ಮುಖ್ಯಮಂತ್ರಿ ಆಗಿದ್ದ ವೇಳೆ ಒಂದು ಸಾವಿರ ವಿಕಲಚೇತನರಿಗೆ ಕೆಇಬಿ ಇಲಾಖೆ ಉದ್ಯೋಗ ಕೊಡಿಸಿದ್ದೆ ಆದರೆ ಪರ್ಮನೆಂಟ್ ಮಾಡದೇ ಇದ್ದಾಗ ಮತ್ತೆ ಎರಡನೇ ಆವದಿಯಲ್ಲಿ ಮುಖ್ಯಮಂತ್ರಿ ಆಗಿ ಒಂದು ಸಾವಿರ ನೌಕರರನ್ನು ಪರ್ಮ ನೆಂಟ್ ಮಾಡಿದೆ ಆ ಕುಟುಂಬಗಳು ಇಂದಿಗೂ ನೆನಪಿಸಿ ಕೊಳ್ಳುತ್ತಾರೆ ಎಂದು ಹೇಳಿದರು.ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ 16 ಲಕ್ಷ ವೆಚ್ಚದಲ್ಲಿ 126 ವಿಕಲಚೇತನರಿಗೆ ವ್ಹೀಲ್ ಚೇರ್, ತ್ರಿಚಕ್ರದ ಸೈಕಲ್, ವಾಕಿಂಗ್ ಸ್ಟಿಕ್, ಶ್ರಾವಣ ಸಾಧನ ವಿತರಣೆ ಹಾಗೂ 155 ಅಗತ್ಯ ಸಾಧನ ಸಲಕರಣೆಗಳ ನೀಡಿದ್ದೇನೆ ಹಾಗೂ 60 ಲಕ್ಷ ವೆಚ್ಚದಲ್ಲಿ ನಲವತ್ತು ಎಲೆಕ್ಟ್ರಿಕ್ ಬೈಕ್ ಗಳನ್ನು ನಲವತ್ತು ವಿಕಲಚೇತನರಿಗೆ ನೀಡಿದ್ದೇನೆ ಎಂದು ತಿಳಿಸಿದರು.ಇದೇ ವೇಳೆ ಸಾವಿರಾರು ವಿಕಲಚೇತನರಿಗೆ ಹತ್ತು ಹಲವು ರೀತಿಯಲ್ಲಿ ಸರ್ಕಾರದ ಸವಲತ್ತುಗಳನ್ನು ತಲುಪಿಸಿ ಸಾಮಜಿಕ ಸೇವೆ ಮಾಡುತ್ತಿದ್ದ ಸಮಾಜ ಸೇವಕ ಕೆ.ಎಲ್ ಹೇಮಂತ್ ಅವರನ್ನು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಶಾಲು ಹೊದಿಸಿ ಹಾರಹಾಕಿ ಗೌರವಿಸಿದರು.ವಿಕಲಚೇತನರಿಗೆ ಎಲೆಕ್ಟ್ರಿಕ್ ಬೈಕ್ ಕೊಟ್ಟಿದ್ದಕ್ಕೆ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ವಿಕಲಚೇತನರು ಹಾರಾಹಾಕಿ ಶಾಲು ಹೊದಿಸಿ ಅಭಿನಂದಿಸಿದರು.ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕರಾದ ಅಶ್ವಿನ್, ಕೆ.ಮಹದೇವ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿ.ಪಂ.ಮಾಜಿ ಸದಸ್ಯರಾದ ಎಂ.ಟಿ.ಕುಮಾರ್, ಅಚ್ಯುತಾನಂದ್, ಅಮಿತ್ ದೇವರಹಟ್ಟಿ, ಸಿ.ಜೆ.ದ್ವಾರಕೀಶ್, ಜೆಡಿಎಸ್ ರಾಜ್ಯ ಘಟಕದ ಪ್ರ.ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್, ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ಪುರಸಭೆ ಮಾಜಿ ಸದಸ್ಯರಾದ ಕೆ.ಉಮೇಶ್, ಕೆ.ಎಲ್.ಜಗದೀಶ್, ಮಾಜಿ ಅಧ್ಯಕ್ಷರಾದ ಗೀತಾಮಹೇಶ್, ಡಿ.ಕಾಂತರಾಜ್,ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗೆರೆ ಕುಚೇಲ, ಜೆಡಿಎಸ್ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮೀ, ವಕೀಲ ಅಂಕನಹಳ್ಳಿ ತಿಮ್ಮಪ್ಪ, ಹುಣಸೂರು ಉಪವಿಭಾಗಾಧಿಕಾರಿ ಕಾವ್ಯರಾಣಿ, ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ, ತಾ.ಪಂ.ಇಓ ಕುಲದೀಪ್, ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ರಾಘವೇಂದ್ರ, ಸಿಡಿಪಿಓ ಅಣ್ಣಯ್ಯ ಸೇರಿದಂತೆ ಅನೇಕರು ಇದ್ದರು.

# ಉಕ್ರೇನ್ ವಿರುದ್ಧ ಯುದ್ಧ: 21.8 ಟನ್ ಚಿನ್ನ ಮಾರಿದ ರಷ್ಯಾ



**ನವದೆಹಲಿ,ಏ.25:** ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧವು ಈಗ ಐದನೇ ವರ್ಷಕ್ಕೆ ಪ್ರವೇಶಿಸಿದೆ ಮತ್ತು ಅದರ ಪರಿಣಾಮವು ಯುದ್ಧ ವಲಯಕ್ಕೆ ಮಾತ್ರ ಸೀಮಿತವಾಗಿಲ್ಲ. ವರದಿಗಳ ಪ್ರಕಾರ, ರಷ್ಯಾದ ಕೇಂದ್ರ ಬ್ಯಾಂಕ್ 2026 ರ ಆರಂಭದಲ್ಲಿ ಸುಮಾರು 22,000 ಕಿಲೋಗ್ರಾಂಗಳಷ್ಟು (21.8 ಟನ್) ಚಿನ್ನವನ್ನು ಮಾರಾಟ ಮಾಡಿದೆ, ಇದರ ಮೌಲ್ಯ ಸುಮಾರು 33,440 ಕೋಟಿ (ಸುಮಾರು $334.4 ಬಿಲಿಯನ್). ಈ ಪರಿಸ್ಥಿತಿಯ ಹಿಂದಿನ ಕಾರಣ ನಿರ್ಣಾಯಕವಾಗಿದೆ, ಏಕೆಂದರೆ ರಷ್ಯಾದ ಬಜೆಟ್ ಕೊರತೆ ಮಾರ್ಚ್ 2026 ರ ವೇಳೆಗೆ $61.2 ಬಿಲಿಯನ್ ತಲುಪಿದೆ. ಇದರರ್ಥ ಸರ್ಕಾರದ ಆದಾಯವು ಅದರ ವೆಚ್ಚಗಳಿಗಿಂತ ಕಡಿಮೆಯಾಗಿದೆ ಮತ್ತು ಹೆಚ್ಚಿನ ಖರ್ಚು ಯುದ್ಧದ ಕಡೆಗೆ ಹೋಗುತ್ತಿದೆ.

ಯುದ್ಧ ಮುಂದುವರೆದಂತೆ, ವೆಚ್ಚಗಳು ಸಹ ಹೆಚ್ಚುತ್ತಿವೆ. ಪಾಶ್ಚಿಮಾತ್ಯ ದೇಶಗಳು ವಿಧಿಸಿರುವ ನಿರ್ಬಂಧಗಳು ರಷ್ಯಾದ ಆರ್ಥಿಕತೆಯ ಮೇಲೂ ಪರಿಣಾಮ ಬೀರಿವೆ. ಭಾರತ ಸಹಾಯ ಮಾಡಲು ಪ್ರಯತ್ನಿಸಿದೆ, ಆದರೆ ಅಂತರರಾಷ್ಟ್ರೀಯ ವ್ಯಾಪಾರ ಕಡಿಮೆಯಾಗಿದೆ ಮತ್ತು ವಿದೇಶಿ ಹೂಡಿಕೆ ಕುಸಿದಿದೆ. ಸರ್ಕಾರಕ್ಕೆ ಎರಡು ಆಯ್ಕೆಗಳಿವೆ: ಸಾಲ ಪಡೆಯುವುದು ಅಥವಾ ತನ್ನ ಮೀಸಲು ಬಳಸುವುದು. ರಷ್ಯಾ ಚಿನ್ನವನ್ನು ಮಾರಾಟ ಮಾಡಲು ಆಯ್ಕೆ ಮಾಡಿದೆ. ಕಿಟ್ಕೊ ವರದಿಯ ಪ್ರಕಾರ, ಏಪ್ರಿಲ್ 1, 2026 ರ ಹೊತ್ತಿಗೆ ರಷ್ಯಾದ ಒಟ್ಟು ಚಿನ್ನದ ನಿಕ್ಷೇಪವು 2,304.76 ಟನ್‌ಗಳಿಗೆ ಇಳಿದಿದೆ, ಮಾನಲ್ಲಿ 6.22 ಟನ್‌ಗಳ ಇಳಿಕೆಯಾಗಿದೆ. ರಷ್ಯಾ ವಿಶ್ವದ ಅತಿದೊಡ್ಡ ಚಿನ್ನ ಹೊಂದಿರುವ ದೇಶಗಳಲ್ಲಿ ಒಂದಾಗಿದೆ ಎಂಬುದು ಗಮನಿಸಬೇಕಾದ ಸಂಗತಿ.

ನಾಗರಿಕರಿಂದ ಚಿನ್ನದ ಮಾರಾಟ ಮತ್ತು ಖರೀದಿ

ಆದಾಗ್ಯೂ, ಈ ಮೀಸಲು ಕ್ರಮೇಣ ಕ್ಷೀಣಿಸುತ್ತಿದೆ, ಇದು ರಷ್ಯಾದ ಮೇಲೆ ಹೆಚ್ಚುತ್ತಿರುವ ಆರ್ಥಿಕ ಒತ್ತಡವನ್ನು ಸೂಚಿಸುತ್ತದೆ. ಇದು ರಷ್ಯಾಕ್ಕೆ ಎಚ್ಚರಿಕೆಯನ್ನು ಸೂಚಿಸುತ್ತದೆಯೇ? ಸರಳ ಉತ್ತರ ಹೌದು, ಆದರೆ ಪರಿಸ್ಥಿತಿ ಸ್ವಲ್ಪ ಜಟಿಲವಾಗಿದೆ. ಚಿನ್ನವು ಒಂದು ದೇಶಕ್ಕೆ ತುರ್ತು ನಿಧಿಯಂತೆ. ಪರಿಸ್ಥಿತಿ ಹದಗೆಟ್ಟಾಗ, ದೇಶಗಳು ಹಣವನ್ನು ಸಂಗ್ರಹಿಸಲು ಅದನ್ನು ಮಾರಾಟ ಮಾಡುತ್ತವೆ.ಆದರೆ ಚಿನ್ನದ ನಿರಂತರ ಮಾರಾಟವು ದ್ರವ್ಯತೆ ಸಮಸ್ಯೆ ಗಂಭೀರವಾಗುತ್ತಿದೆ ಎಂದು ಸೂಚಿಸುತ್ತದೆ. ಈ ಪ್ರವೃತ್ತಿ ಮುಂದುವರಿದರೆ, ಭವಿಷ್ಯದ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸಲು ರಷ್ಯಾ ಕಡಿಮೆ ಆಯ್ಕೆಗಳನ್ನು ಹೊಂದಿರುತ್ತದೆ. ಅದೇ ಸಮಯದಲ್ಲಿ, ಸಾಮಾನ್ಯ ನಾಗರಿಕರು ಚಿನ್ನವನ್ನು ಖರೀದಿಸುತ್ತಿದ್ದಾರೆ. ಮಾಸ್ಕೋ ಎಕ್ಸ್ಚೇಂಜ್ ಡೇಟಾ ಪ್ರಕಾರ, ಮಾರ್ಚ್ 2026 ರಲ್ಲಿ ಚಿನ್ನದ ವ್ಯಾಪಾರವು 350% ರಷ್ಟು ಹೆಚ್ಚಾಗಿದೆ.

ಭಾರತದ ಮೇಲೆ ಪರಿಣಾಮ: ಒಂದು ದೇಶದ ಕರೆನ್ಸಿ ದುರ್ಬಲಗೊಂಡಾಗ, ಜನರು ತಮ್ಮ ಸಂಪತ್ತನ್ನು ಉಳಿಸಿಕೊಳ್ಳಲು ಚಿನ್ನವನ್ನು ಖರೀದಿಸುತ್ತಾರೆ. ರೂಬಲ್‌ನ ಮೌಲ್ಯ ಕುಸಿಯುತ್ತಿರುವುದು ಜನರು ನಗದು ಬದಲು ಚಿನ್ನದಲ್ಲಿ ಹೂಡಿಕೆ ಮಾಡಲು ಕಾರಣವಾಗಿದೆ. ಯುದ್ಧ ಮತ್ತು ಅನಿಶ್ಚಿತತೆಯ ಸಮಯದಲ್ಲಿ ಚಿನ್ನವನ್ನು ಯಾವಾಗಲೂ ಸುರಕ್ಷಿತ ತಾಣವೆಂದು ಪರಿಗಣಿಸಲಾಗುತ್ತದೆ. ಭಾರತಕ್ಕೆ ಇದರ ಅರ್ಥವೇನು? ಇದು ಹಲವಾರು ದೃಷ್ಟಿಕೋನಗಳಿಂದ ಮುಖ್ಯವಾಗಿದೆ. ಮೊದಲನೆಯದಾಗಿ, ಚಿನ್ನದ ಬೆಲೆಗಳ ಮೇಲಿನ ಪರಿಣಾಮ. ಭಾರತವು ವಿಶ್ವದ ಅತಿದೊಡ್ಡ ಚಿನ್ನದ ಗ್ರಾಹಕರಲ್ಲಿ ಒಂದಾಗಿದೆ.ರಷ್ಯಾದಂತಹ ದೊಡ್ಡ ದೇಶಗಳು ಮಾರುಕಟ್ಟೆಗೆ ಚಿನ್ನವನ್ನು ಮಾರಾಟ ಮಾಡಿದರೆ, ಜಾಗತಿಕ ಪೂರೈಕೆ ಹೆಚ್ಚಾಗುತ್ತದೆ, ಬೆಲೆಗಳ ಮೇಲೆ ಒತ್ತಡ ಹೇರುತ್ತದೆ. ಮತ್ತೊಂದೆಡೆ, ಜಾಗತಿಕ ಅನಿಶ್ಚಿತತೆ ಹೆಚ್ಚಾದರೆ, ಚಿನ್ನದ ಬೇಡಿಕೆ ಹೆಚ್ಚಾಗುತ್ತದೆ, ಇದು ಬೆಲೆ ಏರಿಕೆಗೆ ಕಾರಣವಾಗಬಹುದು. ಇದಲ್ಲದೆ, ರಷ್ಯಾ ಮತ್ತು ಭಾರತದ ನಡುವಿನ ವ್ಯಾಪಾರ ಹೆಚ್ಚಾಗಿದೆ, ವಿಶೇಷವಾಗಿ ತೈಲ ಮತ್ತು ರಕ್ಷಣಾ ವಲಯಗಳಲ್ಲಿ. ರಷ್ಯಾದ ಆರ್ಥಿಕತೆ ದುರ್ಬಲಗೊಂಡರೆ, ಅದು ಭಾರತ–ರಷ್ಯಾ ವ್ಯಾಪಾರದ ಮೇಲೆ ಪರಿಣಾಮ ಬೀರುತ್ತದೆ. ಇಂಧನ ಬೆಲೆಗಳು ಸಹ ಬದಲಾಗಬಹುದು, ಇದು ಭಾರತದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಮೇಲೆ ಪರಿಣಾಮ ಬೀರುತ್ತದೆ. ಆದಾಗ್ಯೂ, ಭಾರತ ಯಾವಾಗಲೂ ಸಮತೋಲನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತದೆ.

# ಬಿಜೆಪಿಯ ಟೀಕೆಗೆ ಸಚಿವ ಪ್ರಿಯಾಂಕ್ ಖರ್ಗೆ ಮಾರುತ್ತರ



**ಕಲಬುರಗಿ,ಏ.25–**ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಲಬುರಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ ಎನ್ನುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜೊತೆಗೆ ಜಿಲ್ಲೆಯ ಮಕ್ಕಳಿಗೆ ಅವಮಾನವಾಗುವ ರೀತಿಯಲ್ಲಿ ಟ್ವಿಟ್ ಮಾಡಿ ಟೀಕಿಸಿದ್ದ ಬಿಜೆಪಿಗೆ ಖರ್ಗೆ ಟ್ವಿಟ್ ಮೂಲಕ ಮಾರುತ್ತರ ನೀಡಿದ್ದು ವಿದ್ಯಾರ್ಥಿಗಳ ಆತ್ಮವಿಶ್ವಾಸ ಕುಗ್ಗಿಸುವ ಕೆಲಸ ಬಿಜೆಪಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಲಬುರಗಿಯ ವಿದ್ಯಾರ್ಥಿಗಳನ್ನು ಅವಮಾನಿಸುತ್ತಿರುವ ಬಿಜೆಪಿ, ಅವರ ಆತ್ಮಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು ಅಡಗಿಸುವ ಪ್ರಯತ್ನ ಮಾಡುತ್ತಿದೆ ನಿಮಗೆ ಸಮಸ್ಯೆ ಇದ್ದರೆ ನನ್ನನ್ನು ನಿಂದಿಸಿ, ಕಲಬುರಗಿಯ ಮಕ್ಕಳನ್ನು ಅಪಹಾಸ್ಯ ಮಾಡುತ್ತಿರುವುದೇಕೆ ? ಎಂದು ಪ್ರಶ್ನಿಸಿದ್ದಾರೆ.

ಜಿಲ್ಲೆಯ ಶೇಕಡಾವಾರು ಫಲಿತಾಂಶ 85% ಇರಬಹುದು, ಕಳೆದ ಶೈಕ್ಷಣಿಕ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ, ರಾಜ್ಯದಲ್ಲೂ ಮತ್ತು ಕಲಬುರಗಿ ಜಿಲ್ಲೆಯಲ್ಲೂ, ಶೈಕ್ಷಣಿಕ ಗುಣಮಟ್ಟದ ಸುಧಾರಣೆ ಮಾಡಿಕೊಳ್ಳುವ ಶಕ್ತಿ ನಮ್ಮ ಜಿಲ್ಲೆಯ ಮಕ್ಕಳಲ್ಲಿದೆ, ಮತ್ತು ಅದು ಸಾಧ್ಯವಾಗುತ್ತದೆ ಕೂಡ. ಆದರೆ ಪ್ರತಿ ಬಾರಿಯೂ ಕಲಬುರಗಿ ಜಿಲ್ಲೆಯ ಮಕ್ಕಳನ್ನು ಅವಮಾನಿಸುತ್ತಿರುವ ಬಿಜೆಪಿ ರಾಜಕೀಯ ದಿವಾಳಿತನದೊಂದಿಗೆ ನೈತಿಕ ಪ್ರಜ್ಞೆಯೂ ದಿವಾಳಿಯಾಗಿರುವುದನ್ನು ನಿರೂಪಿಸುತ್ತಿದೆ. ಕಲಬುರಗಿ ಜಿಲ್ಲೆಯಲ್ಲಿನ ಬಿಜೆಪಿ ನಾಯಕರ ಮತ್ತು ಕಾರ್ಯಕರ್ತರ ಮಕ್ಕಳಿಗೂ "ದಡ್ಡರು" ಎಂಬ ಹಣೆಪಟ್ಟಿಯನ್ನು ಬಿಜೆಪಿ ಕಟ್ಟುತ್ತಿದೆಯೇ ? ಜಿಲ್ಲೆಯ ಮಕ್ಕಳ ಮನಸಿನ ಮೇಲೆ ದುಷ್ಪರಿಣಾಮ ಬೀರುವಂತಹ ಮಾತುಗಳನ್ನಾಡುತ್ತಿರುವ ಬಿಜೆಪಿಗೆ ಕನಿಷ್ಠ ಸಾಮಾನ್ಯ ಪ್ರಜ್ಞೆ ಇಲ್ಲದಿರುವುದು ನಾಡಿನ ದುರಂತ. ಕಲಬುರಗಿ ಜಿಲ್ಲೆಯ ಮಕ್ಕಳ ಶ್ರಮವನ್ನು, ಅವರ ಬೌದ್ಧಿಕ ಸಾಮರ್ಥ್ಯವನ್ನು ಅವಮಾನಿಸುವ, ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವ ಕೆಲಸವನ್ನು ಬಿಜೆಪಿ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

# ಲಸಿಕೆ ಹಾಕಿಸಲು ಸಲಹೆ



**ನವಲಗುಂದ ,ಏ.25:** ರೈತರು ಆರ್ಥಿಕವಾಗಿ ಸದೃಢರಾಗಲು ಸಾಕಿರುವ ಜಾನುವಾರುಗಳಿಗೆ ಕಾಲುಬಾಯಿಯಂಥಹ ಅನೇಕ ರೋಗಗಳು ಪೀಡಿಸುತ್ತಿದ್ದು, ಸರ್ಕಾರದಿಂದ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ, ರೋಗದ ನಿಯಂತ್ರಣಕ್ಕೆ ಅಭಿಯಾನ ನಡೆಸಲಾಗುತ್ತಿದ್ದು ಪ್ರತಿಯೊಬ್ಬ ರೈತರು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸುವ ಮೂಲಕ ರೋಗ ಹರಡದಂತೆ ಎಚ್ಚರಿಕೆ ವಹಿಸಬೇಕು' ಎಂದು ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ಸೋಮಲಿಂಗಪ್ಪ ಬಳಿಗೇರ ಹೇಳಿದರು.

ಅವರು ಸ್ಥಳೀಯ ಪಶು ಆಸ್ಪತ್ರೆ ಆವರಣದಲ್ಲಿ ಜಾನುವಾರುಗಳಿಗೆ ಒಂಬತ್ತನೇ ಸುತ್ತಿನ ರಾಷ್ಟ್ರೀಯ ಕಾಲು ಮತ್ತು ಬಾಯಿಬೇನೆ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪಶುವೈದ್ಯಾಧಿಕಾರಿ ಡಾ. ಮನೋಹರ ದ್ಯಾಬೇರಿ ಮಾತನಾಡಿ, ಕಾಲುಬಾಯಿ ರೋಗವು ಎತ್ತು, ಹೋರಿ, ಹಸು, ಎಮ್ಮೆಗಳಲ್ಲಿ ವ್ಯಾಪಕ ಹಾನಿ ಉಂಟುಮಾಡುತ್ತದೆ. ಹಾಲಿನ ಇಳುವರಿ ಕಡಿಮೆಯಾಗುವುದು, ಗರ್ಭಕಟ್ಟುವಿಕೆಯಲ್ಲಿ ವಿಳಂಬ ಮತ್ತು ಸಾಮರ್ಥ್ಯ ನಷ್ಟ ಸಂಭವಿಸುತ್ತದೆ. ಆದ್ದರಿಂದ ಮೂರು ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕುವುದು ಅತ್ಯಗತ್ಯವಾಗಿದೆ'

ಏ.23 ರಿಂದ ಒಂದು ತಿಂಗಳ ವರೆಗೆ ಇಲಾಖೆಯ ಸಿಬ್ಬಂದಿಗಳು ತಾಲ್ಲೂಕಿನ ಎಲ್ಲ ಜಾನುವಾರುಗಳಿಗೆ ಉಚಿತವಾಗಿ ಲಸಿಕೆ ಹಾಕಲಿದ್ದಾರೆ. ಜಾನುವಾರು ಮಾಲೀಕರು ಕಾಲುಬಾಯಿ ರೋಗಮುಕ್ತ ತಾಲ್ಲೂಕನ್ನಾಗಿಸುವಲ್ಲಿ ಸಹಕರಿಸಬೇಕು ಅಲ್ಲದೇ ತುರ್ತು ಪಶುವೈದ್ಯಕೀಯ ಚಿಕಿತ್ಸೆಗೆ ಸಹಾಯವಾಣಿ 1962ನ್ನು ಸಂಪರ್ಕಿಸಬಹುದು ಎಂದರು.

ಪ್ರಗತಿಪರ ರೈತ ಪ್ರಕಾಶ ಶಿಗ್ಗಿ ಮಾತನಾಡಿ ಜಾನುವಾರುಗಳಿಗೆ ಸಕಾಲದಲ್ಲಿ ಲಸಿಕೆ ಹಾಕಿಸಿ ರೋಗವನ್ನು ನಿಯಂತ್ರಿಸದಿದ್ದರೆ, ಜಾನುವಾರುಗಳು ಮೃತಪಡಲಿದ್ದು, ರೈತರಿಗೆ ನಷ್ಟ ಉಂಟಾಗಲಿದೆ. ಈ ಸಂಬಂಧ ಗ್ರಾಮೀಣ ಭಾಗದಲ್ಲಿನ ಅಂಗನವಾಡಿ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಾದಿಯರು ಮತ್ತು ಪಶುಸಖಿಯರು, ಸಿಬ್ಬಂದಿಗಳು ರೈತರಿಗೆ ಸಲಹೆ ನೀಡಿ ಜಾಗೃತಿ ಮೂಡಿಸುವಂತೆ ಕಾರ್ಯವಾಗಲಿ ಎಂದು ಪಶುವೈದ್ಯರಲ್ಲಿ ಮನವಿ ಮಾಡಿದರು.

ಸಂತೋಷ ಪಾಟೀಲ, ಸುರೇಶ ಹಡಪದ, ಈಶ್ವರ ಸಂಗಟಿ,ನಾಗನಗೌಡ ಪಾಟೀಲ, ಆಸ್ಪತ್ರೆ ಸುಪ್ರೀಡೆಂಟ್ ಬಸವರಾಜ ಮೊರಬದ, ಕಿರಿಯ ಪಶು ವೈದ್ಯಕೀಯ ಪರೀಕ್ಷಕರಾದ ಮೌನೇಶ ಮರೀತೆಪ್ಪನವರ, ಮಂಜುನಾಥ ಡೊಳ್ಳಿ, ಶಿವಾನಂದ ಹಳ್ಳಿ, ಸೇರಿ ಗ್ರಾಮದ ಮುಖಂಡರು, ಸಿಬ್ಬಂದಿಗಳು ಪಶು ಸಖಿಯರು ಇದ್ದರು.

# ಒಳ್ಳೆಯ ಆಚಾರ ವಿಚಾರಗಳನ್ನು ಗೌರವಿಸುವುದೇ ಧರ್ಮ: ನಿಶ್ಚಲಾನಂದನಾಥ ಸ್ವಾಮೀಜಿ



**ಕಲಬುರಗಿ:ಏ.25:**ಬೆಂಗಳೂರಿನ ಮಲ್ಲತಳ್ಳಿಯಲ್ಲಿರುವ ವಾಸುದೇವ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿರುವವರಿಗೆ ಡಾ. ಹೆಚ್. ತುಕಾರಾಮ್ ತನ್ನ ತಂದೆ ಹೆಸರಿನಲ್ಲಿ ನೀಡುವ "ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ" ತಾಯಿಯ ಹೆಸರಿನಲ್ಲಿ "ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ" ಮತ್ತು ಸಹೋದರನ ಹೆಸರಿನಲ್ಲಿ ನೀಡುವ "ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ" ಯ ಪ್ರದಾನ ಸಮಾರಂಭವನ್ನು ಗಾನಪಲ್ಲವಿ ಆಡಿಟೋರಿಯಂನಲ್ಲಿ ಆಯೋಜಿಸಲಾಗಿತ್ತು.

2024ನೇ ಸಾಲಿನಲ್ಲಿ ಕಪಿಲ ಪಿ ಹುಮನಾಬಾದೆ ಅವರ ಕಥಾಸಂಕಲನ "ಬಣಮಿ"ಗೆ ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿಯನ್ನು, ಮತ್ತು ಜಯಲಕ್ಷ್ಮಿ ಕೆ. ಅವರು ಬರೆದಿರುವ "ಮತ್ತೆ ವಸಂತ" ಕಥಾಸಂಕಲನಕ್ಕೆ "ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ"ಯನ್ನು ಹಾಗೂ ಚಿತ್ರಕಲಾವಿದ ಮೊಹಮ್ಮದ್ ಇಸಾಕ್ ರವರಿಗೆ "ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಯಿತು.

2025 ನೇ ಸಾಲಿನಲ್ಲಿ ದೇವರಾಜು ಚನ್ನಸಂದ್ರ ಅವರು ಬರೆದಿರುವ "ನೂರೆಂಟು ನೋವು" ಕಾದಂಬರಿಗೆ "ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ" ಯನ್ನು ಮತ್ತು ಶ್ರೀಮತಿ ವೀಣಾ ರಾವ್ ಬರೆದಿರುವ "ಅಂಕುರಣ" ಕಾದಂಬರಿಗೆ "ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ" ಯನ್ನು ಹಾಗೂ ಚಿತ್ರ ಕಲಾವಿದೆ ಲೋಚನ ಎನ್ ಕಾಳೇನಹಳ್ಳಿ ಅವರಿಗೆ "ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪುರಸ್ಕೃತರಿಗೆ ಭಿನ್ನವಿತಳೆ ಮತ್ತು 5000 ನಗದು ಬಹುಮಾನವನ್ನು ನೀಡಿ ಸನ್ಮಾನಿಸಲಾಯಿತು

ಕಾರ್ಯಕ್ರಮದ ಉದ್ಘಾಟನೆಯನ್ನು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರು ನೆರವೇರಿಸಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವವರಿಗೆ ಗುರುತಿಸಿ ತನ್ನ ತಂದೆ ತಾಯಿ ಮತ್ತು ಸಹೋದರನ ಹೆಸರಿನಲ್ಲಿ ಡಾಕ್ಟರ್ ಹೆಚ್ ತುಕಾರಾಂ ರವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹೇಳಿದರು. ಮುಂದುವರೆದು ಧರ್ಮದ ಬಗ್ಗೆ ದೀರ್ಘವಾಗಿ ಮಾತನಾಡಿದರು ಮನುಷ್ಯರು ಒಬ್ಬರಿಗೊಬ್ಬರು ಎಲ್ಲರ ಆಚಾರ ವಿಚಾರಗಳನ್ನು ಗೌರವಿಸುವುದು, ಒಳ್ಳೆಯ ಕೆಲಸಗಳನ್ನು ನಿರ್ವಹಿಸುವುದೇ ಧರ್ಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ನಾರಾಯಣ ಘಟ್ಟ ರವರು ವಹಿಸಿದ್ದರು ಅವರು ಮಾತನಾಡುತ್ತಾ ಸಾಹಿತ್ಯ ಕೃಷಿಯಲ್ಲಿ ಮೌಲ್ಯಯುತವಾದದ್ದನ್ನು ಕಟ್ಟಿಕೊಡುವಲ್ಲಿ ಲೇಖಕ ಕವಿ ತನ್ನನ್ನು ತಾನು ದುಡಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಅಧೀಕ್ಷಕರು ಅಬಕಾರಿ ಇಲಾಖೆಯ ಕೆ. ಮೋಹನ್ ಅವರು ಡಾ. ಹೆಚ್. ತುಕಾರಾಮರವರ ತಂದೆ, ತಾಯಿ ಮತ್ತು ತಮ್ಮನ ನಡುವಿನ ಒಡನಾಟವನ್ನು ಹಂಚಿಕೊಂಡರು.

ಕನ್ನಡ ಅಧ್ಯಾಪಕರಾದ ಡಾ. ವಾಸುದೇವ ನಾಡಿಗ್ ಅವರು ಪ್ರಶಸ್ತಿಗಳ ಮಹತ್ವವನ್ನು ಮತ್ತು ಇತ್ತೀಚೆಗೆ ಹಣ ಕೊಟ್ಟು ಕೊಂಡುಕೊಳ್ಳುವ ಪ್ರಶಸ್ತಿಗಳ ಬಗ್ಗೆ ಮಾತನಾಡುತ್ತಾ ಇಂಥವರ ನಡುವೆ ಇಂತಹ ನಿಸ್ವಾರ್ಥ ಮನೋಭಾವದಿಂದ ನೀಡುತ್ತಿರುವ ಈ ಪ್ರಶಸ್ತಿಯು ನಮ್ಮನ್ನು ನಿಜಕ್ಕೂ ಪ್ರೇರೇಪಿಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದ ಉಪಸ್ಥಿತಿಯಿದ್ದ ಆಯೋಜಕರು ಹಾಗೂ ಲೇಖಕರಾದ ಡಾ. ಹೆಚ್. ತುಕಾರಾಂ ರವರು ಪ್ರಸ್ತಾವಿಕ ನುಡಿಗಳನ್ನಾಡಿದರು. ಕೃತಿಗಳ ಆಯ್ಕೆ ಕುರಿತು ಉದಂತ ಶಿವಕುಮಾರ್ ಮಾತನಾಡಿದರು. ದಮ್ಮಪ್ರಿಯ ಎಂ. ಗಿರಿಯಪ್ಪನವರು ಸ್ವಾಗತ ಮಾಡಿದರು, ರಂಗ ಕಲಾವಿದೆ ನಿರ್ಮಲನಾದನ್ ರವರು ನಿರೂಪಣೆ ಮಾಡಿದರು. ಗೋವಿಂದರಾಜ್ ಪಟೇಲ್ ರವರು ವಂದನಾರ್ಪಣೆ ಮಾಡಿದರು.

# ಜನ ಮನ ರಂಜಿಸಿದ ಸಂಗೀತ ಕಾರ್ಯಕ್ರಮ



**ಬೀದರ್: ಏ.25:**ನಾಗನಪಲ್ಲಿಯ ರಮಾಬಾಯಿ ಅಂಬೇಡ್ಕರ್ ಭಜನಾ ಸಂಘ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ತಾಲ್ಲೂಕಿನ ಅಲಿಯಂಬರ್ ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ನಡೆದ ಸಂಗೀತ, ಸಾಂಸ್ಕೃತಿಕ ಹಾಗೂ ಭಜನೆ ಕಾರ್ಯಕ್ರಮ ಜನ ಮನ ರಂಜಿಸಿತು.

ಕಲಾವಿದರಾದ ಪಾರ್ವತಿ ಸಿಂಧೆ, ಚಂದ್ರಮ್ಮ ಕಾಂಬಳೆ, ಶರಣಮ್ಮ ಸಿಂಧೆ, ತಿಪ್ಪಮ್ಮ ಶರಣಪ್ಪ, ಲಕ್ಷ್ಮಿಬಾಯಿ ಪವಾರ್, ಅಶೋಕ ಲಕ್ಷ್ಮಣ, ಸಿದ್ದಮ್ಮ ಮಾರುತಿ, ಉಮಾಶ್ರೀ ಹಣಮಂತ ಅವರು ಜಾನಪದ, ತತ್ವಪದ, ಕ್ರಾಂತಿ ಗೀತೆ, ಭಜನಾ ಪದ, ವಚನ ಗಾಯನ ಮಾಡಿ ಮೆಚ್ಚುಗೆಗೆ ಪಾತ್ರರಾದರು.

ಹಣಮಂತ ಸಿಂಧೆ ಹಾರ್ಮೋನಿಯಂ ನುಡಿಸಿದರೆ, ಸಾಲೋಮಾನ್ ಶಂಕರ ತಬಲಾ ಸಾಥ್ ನೀಡಿದರು.

ಎನ್.ಎಸ್.ಎಸ್.ಕೆ. ನಿರ್ದೇಶಕ ಸಂಗಮೇಶ ಪಾಟೀಲ ಉದ್ಘಾಟಿಸಿ ಮಾತನಾಡಿದರು. ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಗ್ರಾಮ ಪಂಚಾಯಿತಿ ಕರವಸೂಲಿಗಾರ ನರಸಿಂಗರಾವ್ ರಾಜನಾಳ, ದಲಿತ ಸಂಘರ್ಷ ಸಮಿತಿ ಗ್ರಾಮ ಘಟಕದ ಅಧ್ಯಕ್ಷ ವೀರಶೆಟ್ಟಿ ಕಟ್ಟೆ, ಶಂಕರ ಹಲಗೆ, ಮಾಣಿಕಪ್ಪ ಮುಗನೂರೆ, ಶರಣಪ್ಪ ಬಾವಿದೊಡ್ಡಿ, ಲಾಲಪ್ಪ ಬಾವಿದೊಡ್ಡಿ, ಜಿಲ್ಲಾ ಪ್ರಶಸ್ತಿ ಪುರಸ್ಕೃತ ಸಂಗಮೇಶ ಬಾವಿದೊಡ್ಡಿ, ರಮೇಶ ಬಾವಿದೊಡ್ಡಿ, ಕಲಾವಿದರಾದ ಕೃಷ್ಣಪ್ಪ ಕಟ್ಟೆ, ರೇಖಮ್ಮ, ಬಂಡೆಪ್ಪ, ಚಿನ್ನಮ್ಮ, ಶಾಂತಮ್ಮ, ಲಲಿತಾಬಾಯಿ, ತಬಲಾ ವಾದಕ ಜಗನ್ನಾಥ ಮತ್ತಿತರರು ಇದ್ದರು.

# ಸೋಲಾರ್ ಅಳವಡಿಸದ ಮನೆಗಳಿಗೆ ವಿದ್ಯುತ್ ಸಂಪರ್ಕ: ಕ್ರಮಕ್ಕೆ ಆಗ್ರಹ



**ಬೀದರ್: ಏ.25:**ಬೀದರ್ ನಗರದಲ್ಲಿ ಡಿ–1 ರಿಂದ ಡಿ–7 ವರೆಗೆ ಸೋಲಾರ್ ಅಳವಡಿಸದ ಮನೆಗಳಿಗೆ ನಿಯಮಬಾಹಿರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಇಂದು ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಬಣ) ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ನಗರದಲ್ಲಿ ಹೊಸ ಮನೆಗಳಿಗೆ ಸೋಲಾರ್ ಅಳವಡಿಕೆ ಕಡ್ಡಾಯವಾಗಿದ್ದರೂ, ಕೆಲವು ಮನೆಗಳಿಗೆ ನಿಯಮ ಉಲ್ಲಂಘನೆ ಮಾಡಿ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಈ ಕುರಿತು ಹಲವಾರು ಬಾರಿ ದೂರು ಸಲ್ಲಿಸಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಹಿತಿ ಹಕ್ಕು ಅಧಿನಿಯಮ 2005ರಡಿ ಮಾಹಿತಿ ಕೇಳಿದರೂ ಅಗತ್ಯ ಮಾಹಿತಿ ನೀಡದೆ ದಾರಿ ತಪ್ಪಿಸುವ ಕೆಲಸ ನಡೆದಿದೆ ಎಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ನಿಯಮ ಉಲ್ಲಂಘನೆ ಮಾಡಿದ ಜೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು. ಕ್ರಮ ಕೈಗೊಳ್ಳದಿದ್ದಲ್ಲಿ ನಿರಂತರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಚರಣಜೀತ ಆಣದೂರೆ (ಜಿಲ್ಲಾಧ್ಯಕ್ಷರು), ಧನರಾಜ ಸಾಂಗ್ವಿಕರ್ (ತಾಲೂಕಾಧ್ಯಕ್ಷರು), ಧಮ್ಮವೀರ ಗೋಡಬೋಲೆ (ತಾಲೂಕಾ ಪ್ರಧಾನ ಕಾರ್ಯದರ್ಶಿ), ಸುಧೀರ ಕಾಂಬಳೆ (ತಾಲೂಕಾ ಉಪಾಧ್ಯಕ್ಷರು), ಮಹಾಂತೇಶ ಗೌರಕರ್ (ತಾಲೂಕಾಧ್ಯಕ್ಷರು), ಮುಖಂಡರಾದ ಚಂದ್ರಕಾಂತ ಹೆಗಡೆ, , ಅಮಿತ ಜಿರೋಬೆ, ಸೈಯದ ಮಲಿಕ್, ಶಾಮ ಮದನಾ, ಪ್ರಶಾಂತ ಆಳಂದೆ, ರಾಹುಲ ಪೂಜಾರಿ, ಯಶಪಾಲ ಬೋರೆ, ದಶರಥ ಹಳವಾರ, ರಾಕೇಶ್ ದಂಡಿ, ನಿತಿಶ ಸತ್ವಾಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE